www.vijaykarnataka.com
ಸೋಮವಾರ, 10 ಜೂನ್ 2024
CONSUMER CONNECT INITIATIVE
VK
# ವಿಜಯ ಕರ್ನಾಟಕ
ಮಂಗಳೂರು | ಪುಟಗಳು:24
PRIDE OF YOUNG KARNATAKA

144 ವರ್ಷಗಳ ಇತಿಹಾಸದ ಅನನ್ಯ ಶಿಕ್ಷಣ ಸಂಸ್ಥೆ

# ಸೈಂಟ್ ಅಲೋಶಿಯಸ್

## ಪರಿಗಣಿತ ವಿಶ್ವವಿದ್ಯಾಲಯ

LUCET ET ARDET

ESTD : 1880






# ST ALOYSIUS DEEMED TO BE UNIVERSITY

# Congratulations

**Team ST ALOYSIUS on achieving Deemed to be University status**

We are proud to be your
IT SOLUTIONS PROVIDER.

**- Sudesh Lasrado**



SINCE 1994

Nurturing Relationships Thru' Service

# Emdees

Computers & IT Solutions

CONNECTING PEOPLE AND TECHNOLOGY



**30 YEARS EXPERIENCE IN**
SALES & SERVICE
LAPTOPS | COMPUTERS | SERVERS
STORAGE | NETWORKING | FIREWALL | WIFI
BIOMETRIC | CCTV | PRINTERS
INTERACTIVE DISPLAY | PROJECTORS



acer brother Canon CISCO DELL EPSON hp intel
K7 COMPUTING Honeywell lenovo legrand Microsoft molex
NETGEAR RUCKUS WIRELESS SONICWALL tp-link ZEBRA

7676 881188 | S-6, Ramnik Arcade, Bejai Kapikad Road, Mangaluru - 575 004, E-mail: sales@emdees.in

# ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆ: ರಾಷ್ಟ್ರಕ್ಕೆ ಹೆಮ್ಮೆ

**ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆ ದೇಶದ ಬಹುರೂಪಿ ಸಾಂಸ್ಕೃತಿಕ ಅಸ್ಮಿತೆಗಳನ್ನು ಸದಾ ಗೌರವಿಸುತ್ತಾ ಮತ್ತು ಅವುಗಳನ್ನು ಪೋಷಿಸುತ್ತ ಬಂದಿದ್ದು, ಶಿಕ್ಷಣ ಎಂಬುದು ಈ ಸಮಾಜದ ಪ್ರಾಜ್ಞರಿಗೆ ಮಾತ್ರವಲ್ಲ, ಸಮಾಜದ ಕಟ್ಟಕಡೆಯ ಮಗುವಿಗೂ ಸಿಗಬೇಕು ಎಂಬ ಇರಾದೆಯಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ನೀಡುತ್ತಾ ಬಂದಿದೆ. ಈ ಸಮಾಜದ ಪ್ರತಿಯೊಬ್ಬನಿಗೂ ಗುಣಮಟ್ಟದ ಶಿಕ್ಷಣದ ಜತೆಗೆ ವ್ಯಕ್ತಿತ್ವ ವಿಕಸನದ ಹಲವು ದಾರಿಗಳನ್ನು ತೆರೆಯುವ ಉದ್ದೇಶದಿಂದ ದಣಿವಿಲ್ಲದೆ ಇಲ್ಲಿಯ ವರೆಗೆ ಸಂಸ್ಥೆ ಸಾಗಿ ಬಂದಿದೆ.**

■ Dr. Dinesh Naik

ಔಪಚಾರಿಕ ಶಿಕ್ಷಣದ ಕಲ್ಪನೆಯೇ ಇಲ್ಲದಿದ್ದ ದಕ್ಷಿಣ ಕನ್ನಡ ಜಿಲ್ಲೆಗೆ ಶಿಕ್ಷಣದ ಕುರಿತ ಹೊಸ ಬಗೆಯ ಕನಸನ್ನು ಹೊತ್ತು ತಂದವರು ಜೆಸ್ವಿಟ್ ಧರ್ಮಗುರುಗಳು. ಸುಮಾರು 144 ವರ್ಷಗಳ ಹಿಂದೆ ಮಂಗಳೂರಿನಲ್ಲಿ ಸಂತ ಅಲೋಶಿಯಸ್ ಎಂಬ ಶೈಕ್ಷಣಿಕ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಅವರು ಒಂದು ಉನ್ನತ ಮಟ್ಟದ ಶೈಕ್ಷಣಿಕ ಪರಂಪರೆಯನ್ನು ಹುಟ್ಟು ಹಾಕಿದರು. ಅಲ್ಲಿಂದ ತೊಡಗಿ ಇಲ್ಲಿಯ ವರೆಗೆ ಈ ಸಂಸ್ಥೆಯು ಶೈಕ್ಷಣಿಕವಾಗಿ ನಿರಂತರವಾಗಿ ವಿಕಾಸಗೊಳ್ಳುತ್ತಲೇ ಬಂದಿದೆ. ಇಂದು ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆ ಕೇವಲ ಪರೀಕ್ಷಾ ಫಲಿತಾಂಶದ ಕಾರಣಕ್ಕಾಗಿ ಮಾತ್ರ ಜಗತ್ತಿನಾದ್ಯಂತ ಹೆಸರಾಗಿರುವುದಲ್ಲ. ಇಲ್ಲಿನ ಸುಂದರ ಪರಿಸರ, ಆಕರ್ಷಕ ಶೈಕ್ಷಣಿಕ ವಾತಾವರಣ, ವೈವಿಧ್ಯಮಯ ಸಂಶೋಧನ ಕಾರ್ಯಕ್ರಮ, ಪಠ್ಯೇತರ ಚಟುವಟಿಕೆ, ಕಲಾ ಪೋಷಕ ಒಲವು, ಸೆಕ್ಯುಲರ್ ನಿಲುವಿನಿಂದಾಗಿ ಜನಮನ್ನಣೆ ಪಡೆದಿದೆ. ಈ ದೇಶದ ಬಹುರೂಪಿ ಸಾಂಸ್ಕೃತಿಕ ಅಸ್ಮಿತೆಗಳನ್ನು ಸದಾ ಗೌರವಿಸುತ್ತಾ ಮತ್ತು ಅವುಗಳನ್ನು ಪೋಷಿಸುತ್ತ ಬಂದಿರುವ ಈ ಸಂಸ್ಥೆ, ಶಿಕ್ಷಣ ಎಂಬುದು ಈ ಸಮಾಜದ ಪ್ರಾಜ್ಞರಿಗೆ ಮಾತ್ರವಲ್ಲ, ಸಮಾಜದ ಕಟ್ಟಕಡೆಯ ಮಗುವಿಗೂ ಸಿಗಬೇಕು ಎಂಬ ಇರಾದೆಯಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ನೀಡುತ್ತಾ ಬಂದಿದೆ. ಈ ಸಮಾಜದ ಪ್ರತಿಯೊಬ್ಬನಿಗೂ ಗುಣಮಟ್ಟದ ಶಿಕ್ಷಣದ



ಜತೆಗೆ ವ್ಯಕ್ತಿತ್ವ ವಿಕಸನದ ಹಲವು ದಾರಿಗಳನ್ನು ತೆರೆಯುವ ಉದ್ದೇಶದಿಂದ ದಣಿವಿಲ್ಲದೆ ಇಲ್ಲಿಯ ವರೆಗೆ ಸಂಸ್ಥೆ ಸಾಗಿ ಬಂದಿದೆ.

ತನಗಾಗಿ ಮತ್ತು ಇತರರ ಒಳಿತಿಗಾಗಿ ಯುವ ಜನತೆಯನ್ನು ರೂಪಿಸುವುದು ಜೆಸ್ವಿಟ್ ಶಿಕ್ಷಣ ಸಂಸ್ಥೆಯ ಪ್ರಮುಖ ಕಾಣಿಕೆಯಾಗಿದೆ. ಪ್ರಜ್ಞಾವಂತ ನಾಗರಿಕ ಸಮಾಜದ ರೂಪುಗೊಳ್ಳುವಿಕೆಗೆಅರಿವಿನಹರವುವಿಶಾಲವಾಗಬೇಕೆಂಬುದು ಜೆಸ್ವಿಟ್ ಶಿಕ್ಷಣದ ಪ್ರಮುಖ ಆಶಯವೂ ಹೌದು. ಹಾಗಾಗಿ ಜ್ಞಾನದ ಪ್ರಸಾರ ಈ ಸಂಸ್ಥೆಯ ಪ್ರಧಾನ ಆದ್ಯತೆ ಮತ್ತು ಕಾಳಜಿಯಾಗಿದೆ.

ಈ ಸಂಸ್ಥೆಯಲ್ಲಿ ಮಾನವಿಕ, ವಾಣಿಜ್ಯ, ವಿಜ್ಞಾನ - ತಂತ್ರಜ್ಞಾನ ವಿಭಾಗಗಳಲ್ಲಿ ವಿಶಿಷ್ಟ ಬಗೆಯ ಶೈಕ್ಷಣಿಕ ಕಾರ್ಯಕ್ರಮಗಳಿವೆ. ಕಳೆದ ವರ್ಷ ನ್ಯಾಷನಲ್ ಅಸೆಸ್ಮೆಂಟ್ ಮತ್ತು ಅಕ್ರೆಡಿಟೇಶನ್ ಕೌನ್ಸಿಲ್ (NAAC) ನಾಲ್ಕನೇ ಹಂತದ ಮೌಲ್ಯಮಾಪನದಲ್ಲಿ 4.0ರಲ್ಲಿ 3.67ರ ಪಾಯಿಂಟ್‌ನೊಂದಿಗೆ A++ ಗ್ರೇಡ್ ಪಡೆದಿದೆ. ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟಿನ (NIRF) ಮೌಲ್ಯಮಾಪನದಲ್ಲಿ ದೇಶದ ಅತ್ಯುತ್ತಮ ಕಾಲೇಜುಗಳಲ್ಲಿ 44ನೇ ಸ್ಥಾನವನ್ನು ಸಂತ ಅಲೋಶಿಯಸ್ ಕಾಲೇಜು ಪಡೆದುಕೊಂಡಿದೆ.

1999ರಲ್ಲಿ ಕಾಲೇಜು ತನ್ನ ಮೊದಲ ಪೂರ್ಣ ಪ್ರಮಾಣದ ಸ್ನಾತಕೋತ್ತರ ಕಾರ್ಯಕ್ರಮ ಪ್ರಾರಂಭಿಸಿತು. ಮೊದಲು ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (MCA), ನಂತರ ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (MBA) ಅನ್ನು 2004ರಲ್ಲಿ ಪ್ರಾರಂಭಿಸಿತು. ಇದು ನಗರದ ಹೊರವಲಯದಲ್ಲಿ ಹೊಸ ಕ್ಯಾಂಪಸ್‌ನ ಉದ್ಘಾಟನೆಗೆ ಕಾರಣವಾಯಿತು. 2008ರಲ್ಲಿ ಅಲೋಶಿಯಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಆ್ಯಂಡ್ ಇನ್ಫಾರ್ಮೇಷನ್ ಟೆಕ್ನಾಲಜಿ (AIMIT) ಎಂಬ ಹೊಸ ಕ್ಯಾಂಪಸ್ ಅನ್ನು ಮಂಗಳೂರು ನಗರದ ಹೊರವಲಯದ ಕೋಟೆಕಾರು ಬೀರಿಯಲ್ಲಿ ಆರಂಭಿಸಲಾಯಿತು. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮತ್ತು ಕೇಂದ್ರ ಶಿಕ್ಷಣ ಸಚಿವಾಲಯವು 2024ರ ಜನವರಿ 19ರಂದು ಕಾಲೇಜಿಗೆ ಪರಿಗಣಿತ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಿತು.

(ಮುಂದಿನ ಪುಟಕ್ಕೆ)

## ಕಾಲೇಜಿನಲ್ಲಿರುವ ಸೌಲಭ್ಯಗಳು

- ಮೂಲ ಸೌಕರ್ಯಕ್ಕೆ ಸಂಬಂಧಿಸಿದಂತೆ ಕಾಲೇಜಿನ ಕಟ್ಟಡಗಳು ಮತ್ತು ಕ್ಯಾಂಪಸ್ ವಾತಾವರಣವೇ ಈ ಕಾಲೇಜಿನ ಪ್ರಧಾನ ಸೌಲಭ್ಯ. ನಗರದ ಕೇಂದ್ರ ಭಾಗದಲ್ಲಿರುವುದರಿಂದ ಎಲ್ಲ ಕಡೆಯಿಂದ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಂಸ್ಥೆ ನೆಲೆ ನಿಂತಿದೆ.
- 144 ವರ್ಷಗಳಿಂದ ಇರುವ ಬೃಹತ್ ಕಾಲೇಜು ಗ್ರಂಥಾಲಯ. ಸುಮಾರು ಒಂದೂವರೆ ಲಕ್ಷದಷ್ಟು ಪುಸ್ತಕ ಇದೆ. ಬೇರೆಡೆ ದೊರೆಯದ ಅಪರೂಪದಲ್ಲಿ ಅಪರೂಪದ ಪ್ರಮುಖವಾದ ಗ್ರಂಥಗಳು ಇಲ್ಲಿ ಲಭ್ಯವಿದೆ. ಹಾಗೆಯೇ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಸಾರದಲ್ಲಿದ್ದ ಅನೇಕ ಪತ್ರಿಕೆಗಳ ಪ್ರತಿಗಳು ದೊರೆಯುತ್ತವೆ.
- ವಿದ್ಯಾರ್ಥಿಗಳಿಗೆ ವಿಶೇಷ ಸ್ಕಾಲರ್ ಶಿಪ್
- ಕ್ಯಾಂಪಸ್‌ನಲ್ಲೇ ಬಾಲಕ-ಬಾಲಕಿಯರ ಹಾಸ್ಟೆಲ್
- ಮಿಡ್-ಡೇ-ಮೀಲ್
- ವೈವಿಧ್ಯಮಯವಾದ ಸ್ಪೋರ್ಟ್ಸ್- ವಿಶಾಲವಾದ ಕ್ರೀಡಾಂಗಣ. ಒಳಾಂಗಣ ಮತ್ತು ಹೊರಾಂಗಣ ಉಚಿತ ಕ್ರೀಡಾ ತರಬೇತಿ
- ಒಲಿಂಪಿಕ್ಸ್ ಗುಣಮಟ್ಟದ ವಿಶಾಲವಾದ ಈಜುಕೊಳ
- ರೇಡಿಯೋ ಸಾರಂಗ್- ಸಮುದಾಯ ಬಾನುಲಿ
- ಇಟಲಿಯ ಪ್ರಸಿದ್ಧ ಚಿತ್ರಕಾರ ಮೋಸ್ಕೇನಿ ವಿರಚಿತ ಪೈಂಟಿಂಗ್‌ಗಳಿಂದ ತುಂಬಿರುವ ವಿಶ್ವವಿಖ್ಯಾತ ಚಾಪೆಲ್
- ಇಂದು ಬಹುತೇಕ ಕಣ್ಮರೆಯಾಗಿರುವ ಸಾವಿರಾರು ಸ್ಥಳೀಯ ಜಾನಪದೀಯ ವಸ್ತುಗಳನ್ನು ಹೊಂದಿರುವ ವಿಶಿಷ್ಟ ಮ್ಯೂಸಿಯಂ
- ಹತ್ತಾರು ಹವಾನಿಯಂತ್ರಿತ ಸಭಾಂಗಣ, ಬಯಲು ವೇದಿಕೆ, ಯೋಗ ಶಿಕ್ಷಣ, ಯಕ್ಷಗಾನ, ನಾಟಕ




ಇಲಸ್ಟ್ರೇಶನ್: ಶ್ರೀ ಜಾನ್ ಚಂದ್ರನ್, ಕಲಾಶಿಕ್ಷಕರು, ಸಂತ ಅಲೋಶಿಯಸ್ ಪ್ರೌಢಶಾಲೆ.






(ಹಿಂದಿನ ಪುಟದಿಂದ)

## ಲಭ್ಯವಿರುವ ಕೋರ್ಸ್

ಬಿಎ, ಬಿಕಾಂ, ಬಿಕಾಂ (ACCA ಎಂಬೆಡೆಡ್), ಬಿಕಾಂ (ಸಿಎ ಇಂಟೆಗ್ರೇಟೆಡ್), ಬಿಕಾಂ (ಅಪ್ರೆಂಟಿಸ್‌ಶಿಪ್ ಇಂಟರ್ನ್‌ಶಿಪ್ ಎಂಬೆಡೆಡ್), ಬಿಬಿಎ, ಬಿಬಿಎ (ವೃತ್ತಿಪರ), ಬಿಬಿಎ (ವ್ಯಾಪಾರ ಅನಾಲಿಟಿಕ್ಸ್), ಬಿಸಿಎ, ಬಿಎಸ್ಸಿ, ಬಿವೊಕ್, ಬಿಎಸ್ಸಿ (ದೃಶ್ಯ ಸಂವಹನ), ಬಿಎಸ್ಸಿ (ಆಹಾರ ತಂತ್ರಜ್ಞಾನ), ಬಿಎಯಲ್ಲಿರುವ ವಿಷಯವಾರು ಸಂಯೋಜನೆಗಳು, ರಾಜಕೀಯ ವಿಜ್ಞಾನ ಮತ್ತು ಇತಿಹಾಸ, ರಾಜಕೀಯ ವಿಜ್ಞಾನ ಮತ್ತು ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಮತ್ತು ಸಮಾಜಶಾಸ್ತ್ರ, ಇತಿಹಾಸ ಮತ್ತು ಇಂಗ್ಲಿಷ್ ಮೇಜರ್, ಅರ್ಥಶಾಸ್ತ್ರ ಮತ್ತು ಇಂಗ್ಲಿಷ್ ಮೇಜರ್, ಸಮಾಜ ಶಾಸ್ತ್ರ ಮತ್ತು ಅರ್ಥಶಾಸ್ತ್ರ, ಪತ್ರಿಕೋದ್ಯಮ ಮತ್ತು ಅರ್ಥಶಾಸ್ತ್ರ, ಪತ್ರಿಕೋದ್ಯಮ ಮತ್ತು ಇಂಗ್ಲಿಷ್ ಮೇಜರ್, ಪತ್ರಿಕೋದ್ಯಮ ಮತ್ತು ಮನೋ ವಿಜ್ಞಾನ, ಸೈಕಾಲಜಿ ಮತ್ತು ಇಂಗ್ಲಿಷ್ ಮೇಜರ್, ಸಮಾಜಶಾಸ್ತ್ರ ಮತ್ತು ಮನೋವಿಜ್ಞಾನ, ಸಮಾಜ ಕಾರ್ಯ ಮತ್ತು ಮನೋವಿಜ್ಞಾನ, ಪತ್ರಿಕೋದ್ಯಮ ಮತ್ತು ಕಂಪ್ಯೂಟರ್ ಅನಿಮೇಷನ್, ಇತಿಹಾಸ ಮತ್ತು ಅರ್ಥಶಾಸ್ತ್ರ, ಸಮಾಜ ಕಾರ್ಯ ಮತ್ತು ಕಂಪ್ಯೂಟರ್ ಅನಿಮೇಷನ್, ಸಮಾಜಶಾಸ್ತ್ರ ಮತ್ತು ಸಮಾಜ ಕಾರ್ಯ, ಪತ್ರಿಕೋದ್ಯಮ ಮತ್ತು ಸಮಾಜ ಕಾರ್ಯ, ಸಮಾಜಶಾಸ್ತ್ರ ಮತ್ತು ಇಂಗ್ಲಿಷ್ ಮೇಜರ್, ಇಂಗ್ಲಿಷ್ ಮೇಜರ್ ಮತ್ತು ಕಂಪ್ಯೂಟರ್ ಅನಿಮೇಷನ್, ಇತಿಹಾಸ ಮತ್ತು ಕಂಪ್ಯೂಟರ್ ಅನಿಮೇಷನ್, ಕನ್ನಡ ಮೇಜರ್ ಮತ್ತು ಹಿಸ್ಟರಿ, ಕನ್ನಡ ಮೇಜರ್ ಮತ್ತು ಸಮಾಜಶಾಸ್ತ್ರ ಕನ್ನಡ ಮೇಜರ್ ಮತ್ತು ಜರ್ನಲಿಸಂ, ಕನ್ನಡ ಮೇಜರ್ ಮತ್ತು ರಾಜಕೀಯ ವಿಜ್ಞಾನ.

## ಬಿಎಸ್ಸಿಯಲ್ಲಿರುವ ವಿಷಯವಾರು ಸಂಯೋಜನೆ:

ಭೌತಿಕ ವಿಜ್ಞಾನ ವಿಭಾಗ, ರಸಾಯನಶಾಸ್ತ್ರ ಮತ್ತು ಗಣಿತ, ರಸಾಯನಶಾಸ್ತ್ರ ಮತ್ತು ಭೌತಶಾಸ್ತ್ರ, ಕಂಪ್ಯೂಟರ್ ಅನಿಮೇಷನ್ ಮತ್ತು ಗಣಿತ, ಕಂಪ್ಯೂಟರ್ ಅನಿಮೇಷನ್ ಮತ್ತು ಭೌತಶಾಸ್ತ್ರ, ಕಂಪ್ಯೂಟರ್ ಸೈನ್ಸ್ ಮತ್ತು ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ ಮತ್ತು ಗಣಿತ, ಕಂಪ್ಯೂಟರ್ ವಿಜ್ಞಾನ ಮತ್ತು ಭೌತಶಾಸ್ತ್ರ, ಕಂಪ್ಯೂಟರ್ ವಿಜ್ಞಾನ ಮತ್ತು ಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ ಮತ್ತು ಗಣಿತ, ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ, ಎಲೆಕ್ಟ್ರಾನಿಕ್ಸ್ ಮತ್ತು ಗಣಿತ, ಎಲೆಕ್ಟ್ರಾನಿಕ್ಸ್ ಮತ್ತು ಭೌತಶಾಸ್ತ್ರ, ಗಣಿತ ಮತ್ತು ಭೌತಶಾಸ್ತ್ರ, ಗಣಿತ ಮತ್ತು ಸಂಖ್ಯಾಶಾಸ್ತ್ರ, ಭೌತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ, ಜೀವ ವಿಜ್ಞಾನ ವಿಭಾಗ, ಬಯೋಕೆಮಿಸ್ಟ್ರಿ ಮತ್ತು ಸಸ್ಯಶಾಸ್ತ್ರ, ಬಯೋಕೆಮಿಸ್ಟ್ರಿ ಮತ್ತು ಕೆಮಿಸ್ಟ್ರಿ, ಬಯೋಕೆಮಿಸ್ಟ್ರಿ ಮತ್ತು ಪ್ರಾಣಿಶಾಸ್ತ್ರ ಜೈವಿಕ ತಂತ್ರಜ್ಞಾನ ಮತ್ತು ಸಸ್ಯಶಾಸ್ತ್ರ, ಜೈವಿಕ ತಂತ್ರಜ್ಞಾನ ಮತ್ತು ರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ ಮತ್ತು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಮತ್ತು ರಸಾಯನಶಾಸ್ತ್ರ, ಮೈಕ್ರೋಬಯಾಲಜಿ ಮತ್ತು ಸಸ್ಯಶಾಸ್ತ್ರ, ಸೂಕ್ಷ್ಮ ಜೀವವಿಜ್ಞಾನ ಮತ್ತು ರಸಾಯನಶಾಸ್ತ್ರ, ಸೂಕ್ಷ್ಮ ಜೀವವಿಜ್ಞಾನ ಮತ್ತು ಪ್ರಾಣಿಶಾಸ್ತ್ರ, ಆಹಾರ ವಿಜ್ಞಾನ ಮತ್ತು ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ರಸಾಯನಶಾಸ್ತ್ರ, ಮನೋವಿಜ್ಞಾನ ಮತ್ತು ಬಯೋಕೆಮಿಸ್ಟ್ರಿ, ಮನೋವಿಜ್ಞಾನ ಮತ್ತು ಪ್ರಾಣಿಶಾಸ್ತ್ರ, ಮನೋವಿಜ್ಞಾನ ಮತ್ತು ರಸಾಯನಶಾಸ್ತ್ರ, ಮನೋವಿಜ್ಞಾನ ಮತ್ತು ಸಂಖ್ಯಾಶಾಸ್ತ್ರ.

## ಸ್ನಾತಕೋತ್ತರ ಕಾರ್ಯಕ್ರಮಗಳು




ಎಂಎಸ್ಸಿ (ರಸಾಯನಶಾಸ್ತ್ರ), ಎಂಎಸ್ಸಿ (ವಿಶ್ಲೇಷಣಾತ್ಮಕ ರಸಾಯನಶಾಸ್ತ್ರ), ಎಂಎಸ್ಸಿ (ಬಯೋಕೆಮಿಸ್ಟ್ರಿ), ಎಂಎಸ್ಸಿ (ಜೈವಿಕ ತಂತ್ರಜ್ಞಾನ), ಎಂಎಸ್ಸಿ (ಭೌತಶಾಸ್ತ್ರ), ಎಂಎಸ್ಸಿ (ಗಣಿತ), ಎಂಎಸ್ಸಿ (ಆಹಾರ ವಿಜ್ಞಾನ, ಪೋಷಣೆ ಮತ್ತು ಆಹಾರಕ್ರಮ), ಎಂಎಸ್ಸಿ (ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ), ಎಂಎಸ್ಸಿ (ಕಾರ್ಪೊರೇಟ್ ಸೈಕಾಲಜಿ), ಎಂಎ (ಅರ್ಥಶಾಸ್ತ್ರ), ಎಂಎ (ಇಂಗ್ಲಿಷ್), ಎಂಎ (ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ), ಎಂಎ (ಸಾರ್ವಜನಿಕ ನೀತಿ ಮತ್ತು ಆಡಳಿತ), ಎಂಕಾಂ (ಹಣಕಾಸು ಮತ್ತು ವಿಶ್ಲೇಷಣೆ), ಎಂಕಾಂ (ಮಾಸ್ಟರ್ ಆಫ್ ಕಾಮರ್ಸ್), ಎಂಎಸ್‌ಡಬ್ಲ್ಯು (ಮಾಸ್ಟರ್ ಆಫ್ ಸೋಶಿಯಲ್ ವರ್ಕ್), ಎಂಸಿಎ, ಎಂಎಸ್ಸಿ (ಸಾಫ್ಟ್‌ವೇರ್ ತಂತ್ರಜ್ಞಾನ), ಎಂಎಸ್ಸಿ (ಬಯೋಇನ್ಫರ್ಮ್ಯಾಟಿಕ್ಸ್), ಎಂಎಸ್ಸಿ (ಡೇಟಾ ಸೈನ್ಸ್ ), ಎಂಎಸ್ಸಿ (ಬಿಗ್ ಡೇಟಾ ಅನಾಲಿಟಿಕ್ಸ್), ಎಂಎಸ್ಸಿ (ಪ್ರಾಣಿಶಾಸ್ತ್ರ), ಎಂಎಸ್ಸಿ (ಕ್ಲಿನಿಕಲ್ ಸೈಕಾಲಜಿ), ಎಂಎಸ್ಸಿ (ಸಾವಯವ ರಸಾಯನಶಾಸ್ತ್ರ)

## ಸಂಶೋಧನಾ ಕಾರ್ಯಕ್ರಮಗಳು

**ಇಂಗ್ಲಿಷ್, ರಾಜಕೀಯ ವಿಜ್ಞಾನ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಸಮಾಜ ಕಾರ್ಯ, ಜೈವಿಕ ತಂತ್ರಜ್ಞಾನ, ವ್ಯಾಪಾರ ಆಡಳಿತ, ಕಂಪ್ಯೂಟರ್ ಅಪ್ಲಿಕೇಶನ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಅರ್ಥಶಾಸ್ತ್ರ ಕಾರ್ಪೊರೇಟ್ ಸೈಕಾಲಜಿ, ಗಣಿತ, ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ, ಆಹಾರ ಪೋಷಣೆ ಮತ್ತು ಆಹಾರ ಪದ್ಧತಿ, ಬಿಗ್ ಡೇಟಾ ಅನಾಲಿಟಿಕ್ಸ್, ಸಾಫ್ಟ್‌ವೇರ್ ತಂತ್ರಜ್ಞಾನ, ಡೇಟಾ ಸೈನ್ಸ್, ಬಯೋಇನ್ಫಾಮೆಟಿಕ್ಸ್, ವಾಣಿಜ್ಯ, ವಾಣಿಜ್ಯ (ಹಣಕಾಸು ಮತ್ತು ವಿಶ್ಲೇಷಣೆ), ಸಾರ್ವಜನಿಕ ನೀತಿ ಮತ್ತು ಆಡಳಿತ, ಪ್ರಾಣಿಶಾಸ್ತ್ರ ಕ್ಲಿನಿಕಲ್ ಸೈಕಾಲಜಿ, ಸಾವಯವ ರಸಾಯನಶಾಸ್ತ್ರ**




## ಡಿಪ್ಲೊಮಾ ಕಾರ್ಯಕ್ರಮಗಳು

ರಾಜಕೀಯ, ಚಲನಚಿತ್ರ ಮತ್ತು ಸಂಸ್ಕೃತಿಯಲ್ಲಿ ಡಿಪ್ಲೊಮಾ - ರಾಜಕೀಯ ವಿಜ್ಞಾನ ವಿಭಾಗ, ಸಂಘರ್ಷ, ಶಾಂತಿ ಮತ್ತು ಸಮನ್ವಯದಲ್ಲಿ ಡಿಪ್ಲೊಮಾ - ರಾಜಕೀಯ ವಿಜ್ಞಾನ ವಿಭಾಗ, ಎಕ್ಸೆಲ್, ಪವರ್ ಬೈ ಮತ್ತು ಟ್ಯಾಲಿಯನ್ನು ಬಳಸಿಕೊಂಡು ವ್ಯವಹಾರ ಪ್ರಕ್ರಿಯೆ ಆಟೊಮೇಷನ್ನಲ್ಲಿ ಡಿಪ್ಲೊಮಾ-ಅರ್ಥಶಾಸ್ತ್ರ ವಿಭಾಗ, ಯೋಗದಲ್ಲಿ ಡಿಪ್ಲೊಮಾ, ವಿಪತ್ತು ನಿರ್ವಹಣೆ ಮತ್ತು ಟ್ರಾಮಾ ಕೌನ್ಸೆಲಿಂಗ್‌ನಲ್ಲಿ ಸ್ನಾತಕೋತ್ತರ ಡಿಪ್ಲೊಮಾ - ಎಂ.ಎಸ್. ಡಬ್ಲ್ಯು ವಿಭಾಗ, ಕಮ್ಯುನಿಕೇಟಿವ್ ಇಂಗ್ಲಿಷ್ ಮತ್ತು ಫೋನೆಟಿಕ್ಸ್‌ನಲ್ಲಿ ಡಿಪ್ಲೊಮಾ - ಇಂಗ್ಲಿಷ್ ವಿಭಾಗ, ವ್ಯವಹಾರ ವಿಶ್ಲೇಷಣೆಯಲ್ಲಿ ಡಿಪ್ಲೊಮಾ - ವಾಣಿಜ್ಯ ವಿಭಾಗ, ಗ್ರಾಫಿಕ್ ವಿನ್ಯಾಸ ಮತ್ತು ಅನಿಮೇಷನ್‌ನಲ್ಲಿ ಡಿಪ್ಲೊಮಾ- ಕಂಪ್ಯೂಟರ್ ಸೈನ್ಸ್ - ಅಪ್ಲಿಕೇಶನ್ - ಅನಿಮೇಶನ್ ವಿಭಾಗ, ಪ್ರೋಗ್ರಾಮಿಂಗ್ ಕೌಶಲ್ಯಗಳಲ್ಲಿ ಡಿಪ್ಲೊಮಾ - ಕಂಪ್ಯೂಟರ್ ಸೈನ್ಸ್ - ಅಪ್ಲಿಕೇಶನ್ - ಅನಿಮೇಶನ್ ವಿಭಾಗ, ಉದ್ಯಮಶೀಲತೆ ಮತ್ತು ಮಾರ್ಕೆಟಿಂಗ್ ತಂತ್ರಗಳಲ್ಲಿ ಡಿಪ್ಲೊಮಾ - ಆಹಾರ ವಿಜ್ಞಾನ ವಿಭಾಗ, ಜೀವನಶೈಲಿ ನಿರ್ವಹಣೆಯಲ್ಲಿ ಡಿಪ್ಲೊಮಾ - ದೈಹಿಕಶಾಸ್ತ್ರ ವಿಭಾಗ, ಮಾಧ್ಯಮ ಅಧ್ಯಯನದಲ್ಲಿ ಡಿಪ್ಲೊಮಾ - ಜರ್ನಲಿಸಂ ವಿಭಾಗ, ರಂಗಭೂಮಿ ಕೌಶಲ್ಯಗಳಲ್ಲಿ ಡಿಪ್ಲೊಮಾ - ರಂಗ ಅಧ್ಯಯನ ಕೇಂದ್ರ, ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ (PGDHRM)- ಎಂಎಸ್‌ಡಬ್ಲ್ಯು ವಿಭಾಗ, ಆಹಾರ ವ್ಯವಹಾರ ನಿರ್ವಹಣೆಯಲ್ಲಿ ಡಿಪ್ಲೊಮಾ- ಆಹಾರ ವಿಜ್ಞಾನ ಸ್ನಾತಕೋತ್ತರ ವಿಭಾಗ, ಹಸಿರು ಕೃಷಿಯಲ್ಲಿ ಡಿಪ್ಲೊಮಾ: ಸುಸ್ಥಿರ ಅಭ್ಯಾಸಗಳು ಮತ್ತು ತ್ಯಾಜ್ಯ ನಿರ್ವಹಣೆ (ಮಂಗಳೂರಿನ ಜಿಲ್ಲಾ ಕೇಂದ್ರ ಕಾರಾಗೃಹದ ಅಧೀನ ಕೈದಿಗಳಿಗೆ), ಕೊಂಕಣಿಯಲ್ಲಿ ಡಿಪ್ಲೊಮಾ/ಸ್ನಾತಕೋತ್ತರ ಡಿಪ್ಲೊಮಾ- ಕೊಂಕಣಿ ಕೇಂದ್ರ, ಮಾನಸಿಕ ಯೋಗಕ್ಷೇಮದಲ್ಲಿ ಡಿಪ್ಲೊಮಾ- ಕೌನ್ಸೆಲಿಂಗ್ ವಿಭಾಗ.

ಶೈಕ್ಷಣಿಕವಾಗಿ ಇಷ್ಟೊಂದು ಸುದೀರ್ಘ ಚರಿತ್ರೆ ಮತ್ತು ಅಪಾರ ಸಂಪನ್ಮೂಲಗಳನ್ನು ಹೊಂದಿರುವ ಸಂಸ್ಥೆ ನಮ್ಮ ನಾಡಿನಲ್ಲಿ ವಿರಳ. ಸಂತ ಅಲೋಶಿಯಸ್ ತನ್ನ ಆದರ್ಶ ಶೈಕ್ಷಣಿಕ




ಕಾರ್ಯಕ್ರಮಗಳನ್ನು ಮುಂದುವರಿಸುವುದಕ್ಕೆ ಈ ವಿಶ್ವವಿದ್ಯಾಲಯ ಮಾನ್ಯತೆಯು ಮತ್ತಷ್ಟು ಸಹಕಾರಿಯಾಗಿದೆ. ಗುಣಮಟ್ಟದ ಶಿಕ್ಷಣವನ್ನು ಸಮಾಜದ ಕೊನೆಯ ಪ್ರಜೆಗೂ ಸಿಗಬೇಕೆಂಬ ಸಂಸ್ಥೆಯ ಇರಾದೆ ವಿಶ್ವವಿದ್ಯಾಲಯ ಸ್ಥಾನಮಾನದಿಂದ ಇನ್ನಷ್ಟು ಗಟ್ಟಿಗೊಳ್ಳಲಿದೆ. ಜಾಗತಿಕವಾಗಿ ಸಾಕಷ್ಟು ಬೇಡಿಕೆ ಇರುವ ಮತ್ತು ನಾಡಿನ ಬಹುತೇಕ ಸಂಸ್ಥೆಗಳಲ್ಲಿ ದೊರೆಯದ ವಿಶಿಷ್ಟ ಹೊಸ ಬಗೆಯ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪರಿಚಯಿಸುವ ಮೂಲಕ ವಿದ್ಯಾರ್ಥಿಗಳ ಪ್ರತಿಭಾ ಪಲಾಯನವಾಗದಂತೆ ನೋಡಿಕೊಳ್ಳುವ ಸಾಮಾಜಿಕ ಜವಾಬ್ದಾರಿಯನ್ನು ಸಂಸ್ಥೆ ಹೊತ್ತುಕೊಳ್ಳುವ ಉದ್ದೇಶವನ್ನೂ ಹೊಂದಿದೆ.

(Dr Dinesh Naik, an Associate Professor, Dept of Kannada, St Aloysius Deemed to be University, Mangaluru)

ಪರಿಕಲ್ಪನೆ: ರಾಮಕೃಷ್ಣ ಡಿ., ಸಹಾಯಕ ಮಹಾಪ್ರಬಂಧಕರು
ರೆಸ್ಪಾನ್ಸ್ ತಂಡ: ಸಾಕೇತ್ ಭಂಡಾರಿ
ನಿರ್ವಹಣೆ: ಯೋಗೀಶ ಹೊಳ್ಳ ಎಂ., ಮುಖ್ಯ ಉಪಸಂಪಾದಕರು
ಸಹಕಾರ: ಬಿ.ರವೀಂದ್ರ ಶೆಟ್ಟಿ, ಸ್ಥಾನೀಯ ಸಂಪಾದಕರು
ಮಹೇಶ್ ಪಟ್ಟಾಜೆ, ಮುಖ್ಯ ಉಪಸಂಪಾದಕರು
ವಿನ್ಯಾಸ: ಆ್ಯಂಟನಿ ರಾಜ್ ಸುಳ್ಯ, ಪ್ರಮೋದ್ ಕುಮಾರ್
ಕಮಲ್ ಕದ್ರಿ, ರಾಜೇಶ್ ಶೆಟ್ಟಿ
ಸಹಕಾರ: ವಿಲಿಯಂ ರೆಬೆಲ್ಲೊ, ರೆಬೆಲ್ಲೊ ಎಡ್ವರ್ಟೈಸರ್ಸ್, ಮಂಗಳೂರು

# ನಂಬಿಕೆಯಿಂದ ಸಾರ್ಥಕತೆಯೆಡೆಗೆ ದಾರ್ಶನಿಕ ಶಿಕ್ಷಣ ತಜ್ಞರ ಬದುಕಿನ ಹೆಜ್ಜೆಗಳು

ಮಂಗಳೂರಿನ ಸೈಂಟ್ ಅಲೋಶಿಯಸ್ (ಡೀಮ್ಡ್ ಟು ಬಿ ಯೂನಿವರ್ಸಿಟಿ) ಉಪಕುಲಪತಿಯಾಗಿ ರೆ.ಡಾ. ಪ್ರವೀಣ್ ವಿ. ಮಾರ್ಟಿಸ್ ಎಸ್.ಜೆ. ಅಧಿಕಾರ ವಹಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ 144 ವರ್ಷಗಳ ಇತಿಹಾಸ ಇರುವ, ಲಕ್ಷಾಂತರ ಮಾನವ ಸಂಪನ್ಮೂಲವನ್ನು ವಿಶ್ವಕ್ಕೆ ಕೊಡುಗೆಯಾಗಿ ನೀಡಿದ ಸಂಸ್ಥೆಯ ಸಾಧನೆಗಳು, ಎದುರಿಸಿದ ಸವಾಲುಗಳು, ಭರವಸೆಯ ಭವಿಷ್ಯದ ಯೋಜನೆಗಳ ಕುರಿತು ಸಮಗ್ರವಾಗಿ ವಿವರಣೆ ನೀಡಿದ್ದಾರೆ. ದೇವರ ಮೇಲಿನ ನಂಬಿಕೆ, ಜಾತಿ, ಲಿಂಗ, ಧರ್ಮ, ವರ್ಗ ಎಂಬ ಭೇದಭಾವ ಇಲ್ಲದೆ ಎಲ್ಲರನ್ನೂ ಪರಸ್ಪರ ಗೌರವಿಸುವ ಮಹತ್ವದ ಬಗ್ಗೆ ಅವಶ್ಯಕತೆ ಮತ್ತು ಈ ನಿಟ್ಟಿನಲ್ಲಿ ಯುವ ಸಮುದಾಯವನ್ನು ಬೆಳೆಸುವ ಯೋಜನೆಯನ್ನು ಚಿಂತನೆಯನ್ನು, ಕಾರ್ಯಸೂಚಿಯನ್ನು ಶಿಕ್ಷಣ ಸಂಸ್ಥೆಗಳು ಹಾಕಿಕೊಳ್ಳಬೇಕು ಎಂಬುದನ್ನು ಸಂದರ್ಶನದಲ್ಲಿ ಅಭಿಪ್ರಾಯಪಟ್ಟರು.

ಸೈಂಟ್ ಅಲೋಶಿಯಸ್ ಕಾಲೇಜಿನ (ಸ್ವಾಯತ್ತ) ಮಾಜಿ ಪ್ರಾಂಶುಪಾಲರಾದ ರೆ.ಡಾ.ಪ್ರವೀಣ್ ವಿ.ಮಾರ್ಟಿಸ್ ಎಸ್.ಜೆ ಅವರು ಮೇ 20, 1974 ರಂದು ಉಡುಪಿ ಜಿಲ್ಲೆಯಲ್ಲಿ ಜನಿಸಿದರು. ಅವರು ಶಂಕರಪುರದ ಸೈಂಟ್ ಜಾನ್ಸ್ ಶಿಕ್ಷಣ ಸಂಸ್ಥೆಗಳಲ್ಲಿ ತಮ್ಮ ಆರಂಭಿಕ ಶಿಕ್ಷಣವನ್ನು ಪಡೆದರು, ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದ ಬಳಿಕ ಸೈಂಟ್ ಜೋಸೆಫ್ ಕಾಲೇಜಿನಲ್ಲಿ (ಬೆಂಗಳೂರು) ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅವರು ಬೆಲ್ಜಿಯಂನ ನಮ್ಮೂರ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದರು. ಕೆಮಿಸ್ಟ್ರಿ ಮತ್ತು ಎಲೆಕ್ಟ್ರೋಕೆಮಿಸ್ಟ್ರಿ ಆಫ್ ಸರ್ಫೇಸಸ್‌ನಲ್ಲಿ ಪರಿಣತಿ ಪಡೆದರು. 'ಮಲ್ಟಿ-ವಾಲ್ಡ್ ಕಾರ್ಬನ್ ನ್ಯಾನೊಟ್ಯೂಬ್ಸ್ ಡೆಕೋರೇಟೆಡ್ ವಿತ್ ಮೆಟಲ್ ನ್ಯಾನೊಕ್ರಿಸ್ಟಲ್ಸ್ ಮತ್ತು ಇನ್ಕಾರ್ಪೊರೇಟೆಡ್ ಇನ್ಟು ಮೆಟಲ್ ಮ್ಯಾಟ್ರಿಸಸ್' ಎಂಬ ವಿಷಯದಲ್ಲಿ ಸಂಶೋಧನೆ ನಡೆಸಿ ಪಿಎಚ್‌ಡಿ ಪಡೆದಿರುತ್ತಾರೆ. 15ಕ್ಕೂ ಅಧಿಕ ಲೇಖನಗಳು ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ರಸಾಯನಶಾಸ್ತ್ರ ಕ್ಷೇತ್ರದ ಅವರ ಅಪಾರ ಜ್ಞಾನವು ಹಲವು ಕ್ಷೇತ್ರಕ್ಕೆ ಕೊಡುಗೆಯಾಗಿವೆ.



ಸಂದರ್ಶನ

**ಕುಲಪತಿಗಳಾದ ರೆ.ಡಾ. ಪ್ರವೀಣ್ ವಿ. ಮಾರ್ಟಿಸ್ ಎಸ್.ಜೆ. ಅವರನ್ನು ಅಬ್ದುಲ್ ರಶೀದ್ ಎ.ಪಿ.ಕೆ ಮತ್ತು ಮರ್ಯಮ್ ಅಫ್ತಾಬ್ ಕೋಲಾ ಅವರು ನಡೆಸಿದ ಸಂದರ್ಶನದಲ್ಲಿ ಬಾಲ್ಯ, ಸಾಧಿಸಿದ ಹಲವು ಮೈಲುಗಲ್ಲುಗಳು, ಧರ್ಮಪಾಲನೆಯ ಕುರಿತ ಒಲವು ಮತ್ತು ಮಂಗಳೂರಿನ ಪ್ರಖ್ಯಾತ ಶೈಕ್ಷಣಿಕ ಕೇಂದ್ರದ ಯುವ ಆಡಳಿತಗಾರರಾಗಿ, ಡೀಮ್ಡ್ ವಿಶ್ವವಿದ್ಯಾಲಯವಾಗಿ ಮಾನ್ಯತೆ ಪಡೆಯಲು ನಡೆಸಿದ ಸಾಂಘಿಕ ಪ್ರಯತ್ನದ ಕುರಿತು ಸಂಪೂರ್ಣ ವಿವರ ನೀಡಿದ್ದಾರೆ.**

■ **ನಿಮ್ಮ ಕೌಟುಂಬಿಕ ಹಿನ್ನೆಲೆ, ಬಾಲ್ಯ, ಬೆಳೆದು ಬಂದ ಹಾದಿ ಮತ್ತು ಇಂದಿನ ಬೆಳವಣಿಗೆಯ ಪರಿಪೂರ್ಣತೆಯನ್ನು ಹೇಗೆ ರೂಪಿಸಲು ಸಾಧ್ಯವಾಗಿದೆ?**

– ನಮ್ಮ ಬದುಕು ನಂಬಿಕೆ ಎಂಬ ಶ್ರೇಷ್ಠತೆಯೊಂದಿಗೆ ಹೆಣೆದುಕೊಂಡಿದೆ. ಚರ್ಚ್‌ನ ಎಲ್ಲ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಿಕೆ ಮತ್ತು ಸಮುದಾಯದೊಂದಿಗೆ ಕೊಂಡಿಯಾಗಿ ಬೆರೆತ ಕುಟುಂಬದಿಂದ ಬಂದಿರುತ್ತೇನೆ. ತಂದೆ ಮಿಲಿಟರಿ ಹಿನ್ನೆಲೆಯುಳ್ಳವರು. ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಬದುಕಿನಲ್ಲಿ ಶಿಸ್ತನ್ನು ಮೈಗೂಡಿಸಿಕೊಂಡರು. ತಾಯಿ ಗೃಹಿಣಿ ಹಾಗೂ ಶ್ರಮ ಜೀವಿ. ಬಿಡುವಿಲ್ಲದ ಸಮಯದ ನಡುವೆಯೂ ಅವರು ನಮ್ಮ ಮನೆಯ ಜವಾಬ್ದಾರಿಗಳು ಮತ್ತು ಶಿಕ್ಷಣದ ನಡುವೆ ಸಮತೋಲನವನ್ನು ಕಾಯ್ದುಕೊಂಡವರು. ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳ ಸಮಗ್ರ ಮಿಶ್ರಣದ ಜೊತೆಗೆ ನನಗೆ ಅತ್ಯುತ್ತಮ ಶಿಕ್ಷಣವನ್ನು ನೀಡಿದ್ದಾರೆ. ಮುಖ್ಯವಾಗಿ ರೀಡರ್ಸ್ ಡೈಜೆಸ್ಟ್ ಮತ್ತು ನ್ಯಾಷನಲ್ ಜಿಯಾಗ್ರಫಿಕ್ ಸೇರಿದಂತೆ ಮಾನವ ವಿಕಾಸಕ್ಕೆ ಪೂರಕವಾದ ಪುಸ್ತಕಗಳನ್ನು ತಂದೆಯು ತಂದು ಕೊಡುತ್ತಿದ್ದರು. ಆ ಮೂಲಕ ಓದುವ ಹವ್ಯಾಸವನ್ನು, ಓದಿನ ಕುರಿತು ಉತ್ಸಾಹವನ್ನು ನಮ್ಮಲ್ಲಿ ಮೂಡಿಸಿದರು. ಕನ್ನಡ ಭಾಷೆಯ ಕಲಿಕೆಯ ಮಹತ್ವವನ್ನು ಮನಮುಟ್ಟುವಂತೆ ತಿಳಿಹೇಳುತ್ತಿದ್ದರು. ಓದಿನಿಂದ ಸಿಗುವ ಜ್ಞಾನ ಭಂಡಾರದ ಅವಶ್ಯಕತೆಯನ್ನು ಮನವರಿಕೆ ಮಾಡುತ್ತಿದ್ದರು.

ಕಠಿಣ ಪರಿಶ್ರಮ, ಶಿಸ್ತು, ಓದುವ ಹವ್ಯಾಸ ಮತ್ತು ಪರಿಸರದ ಮೇಲಿನ ಆಳವಾದ ಪ್ರೀತಿಯಿಂದ ನಿರೂಪಿಸಲ್ಪಟ್ಟ ನಮ್ಮ ಪೋಷಕರ ಪಾಲನೆಯು ನನ್ನ ಬದುಕಿನಲ್ಲಿ ಮೌಲ್ಯಗಳನ್ನು ಹೆಚ್ಚಿಸಿದೆ. ನನ್ನ ತಂದೆಯು ಮಾಡುತ್ತಿದ್ದ ಪರಹಿತಚಿಂತನೆಯ ಪ್ರಯತ್ನಗಳಿಂದ ಪ್ರೇರಿತನಾಗಿ, ನಾನು ಇತರರ ಸೇವೆಯಲ್ಲಿ ನನ್ನ ಜೀವನವನ್ನು ಮುಂದುವರಿಸಿದೆ. ನಾನು ಸಂಪಾದಿಸಿದ್ದ ಪ್ರತಿಯೊಂದು ಪೈಸೆಯೂ ಸಮುದಾಯಕ್ಕೆ ಹಿಂದಿರುಗಿಸುತ್ತಿದ್ದೆ. ಆ ಮೂಲಕ ನಾನು ಸಂತೋಷವನ್ನು ಅನುಭವಿಸುತ್ತಿದ್ದೆ. ಸಾಧನಾಶೀಲ ವಿದ್ಯಾರ್ಥಿಗಳನ್ನು ಮತ್ತು ಸಿಬ್ಬಂದಿಗಳ ಸಾಧನೆಯನ್ನು ಕಂಡು ಹೆಮ್ಮೆ ಪಡುವ ತಾನು, ಇಂತಹ ಸಾಧಕರು ತಮ್ಮ ಕುಟುಂಬದ ಸದಸ್ಯರು ಎಂದು ಪ್ರೀತಿಸುವ ವ್ಯಕ್ತಿ ತಾನು. ಕಳೆದ ಕೆಲವು ವರ್ಷಗಳಿಂದ ಸಣ್ಣ ಪುಟ್ಟ ಆರೋಗ್ಯದ ತೊಂದರೆಗಳನ್ನು ಎದುರಿಸುತ್ತಿದ್ದರೂ, ನೀವು ದೇವರ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಂಡಾಗ, ದೇವರು ನಿಮ್ಮನ್ನು ನೋಡಿಕೊಳ್ಳುತ್ತಾನೆ ಎಂದು ನಾನು ದೃಢವಾಗಿ ನಂಬುತ್ತೇನೆ. ಈ ನಂಬಿಕೆಯು ನನ್ನನ್ನು ವಿನಮ್ರವಾಗಿ ಇರಿಸುತ್ತದೆ.

■ **ನಿಮ್ಮ ಪರಿಶ್ರಮ ಮತ್ತು ಎಂದಿಗೂ ಬಿಟ್ಟುಕೊಡದೆ ಹೋರಾಡುವ ಮನೋಭಾವವು ವಿಶೇಷವಾಗಿ ವಿಶ್ವವಿದ್ಯಾಲಯದ ಸ್ಥಾನಮಾನ ಪಡೆಯುವ ಹಿಂದೆ ಇತ್ತು. ಈ ರೀತಿಯ ಹೋರಾಟದ ಬದುಕು ನಿಮ್ಮ ಬಾಲ್ಯದಿಂದಲೇ ಇತ್ತೇ? ಮತ್ತು ಅವುಗಳನ್ನು ಹೇಗೆ ಅಳವಡಿಸಿಕೊಂಡಿದ್ದೀರಿ ಎಂಬುದನ್ನು ವಿವರಿಸಬಹುದೇ?**

– ಹೌದು, ಮೊದಲಿನಿಂದಲೂ ಆ ದೃಢತೆ ನನ್ನಲ್ಲಿ ಬೇರೂರಿದೆ. ಪ್ರಿನ್ಸಿಪಾಲ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ, ಸಂಸ್ಥೆಗೆ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನ ಮಾನ ಸಿಗಬೇಕು ಎಂಬ ಕನಸು ಕಂಡೆ. ಇದು ಸಮುದಾಯದ ಕನಸೂ ಆಗಿತ್ತು. ನಮ್ಮ ಸಂಸ್ಥೆಯನ್ನು ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನಮಾನಕ್ಕೆ ಏರಿಸಲು ಪೂರಕವಾಗಿದ್ದು ತನ್ನ ತಾರುಣ್ಯ. (ನಗು). ಕೆಲಸ ಮಾಡುವ ತಾರುಣ್ಯ . ದೇವರ ಸೇವೆ ಎಂದು ಪ್ರೀತಿಯಿಂದ ಕೆಲಸ ಆರಂಭಿಸಿದೆ. ದೇವರ ಸೇವೆ ಮಾಡುವ ಭಾವ ಅನುಭವಿಸಿದೆ.

ವಿಶ್ವವಿದ್ಯಾಲಯ ಸ್ಥಾನಮಾನವನ್ನು ಪಡೆಯುವ ಪ್ರಯಾಣವು ಹಲವಾರು ಅಡೆತಡೆಗಳಿಂದ ಕೂಡಿತ್ತು. ಸುಧೀರ್ಘ ಆರು ವರ್ಷಗಳ ಕಾಲ ಹೋರಾಟ ಮಾಡಬೇಕಾಯಿತು. ಆದಾಗ್ಯೂ, ನಮ್ಮ ನಂಬಿಕೆಯು ಅಚಲವಾಗಿ ಉಳಿದಿತ್ತು ಮತ್ತು ನಾವು ಪರಿಶ್ರಮಪಟ್ಟೆವು. ದೇವರ ಅನುಗ್ರಹದಿಂದ ಕೊನೆಗೂ ಯಶಸ್ವಿಯಾಗಿದ್ದೇವೆ.


(ಮುಂದಿನ ಪುಟಕ್ಕೆ)





Estd : 1947
ಎಸ್.ಎಲ್. ಶೇಟ್
ಜ್ಯುವೆಲ್ಲರ್ಸ್ & ಡೈಮಂಡ್ ಹೌಸ್
ಕೆ.ಎಸ್. ರಾವ್ ರಸ್ತೆ,
ಮಂಗಳೂರು – 575001 PH : 0824–2440242.
E-mail : slshet1947@gmail.com

Hearty Congratulations
on having attained status as
St. Aloysius Deemed-to-be University



M/s NAUFAL
NAUFAL
Excellence Ensured | Quality Assured
SUITE #104, THE ALCOVE
VASLANE, MANGALORE - 575 002
96329 88555 / 96630 53555
www.naufalgroup.com



ಮೊದಲ ಕುಲಪತಿಗೆ ಸಂಸ್ಥೆಯ ವತಿಯಿಂದ ಸನ್ಮಾನ ಮಾಡಿದ ಸಂದರ್ಭ

(ಹಿಂದಿನ ಪುಟದಿಂದ)

ಆರು ವರ್ಷಗಳ ಸುದೀರ್ಘ ಪ್ರಯತ್ನದಲ್ಲಿ ಎಲ್ಲೂ ಲಂಚ ಅಥವಾ ಅಡ್ಡದಾರಿಯನ್ನು ಹಿಡಿಯಲಿಲ್ಲ. ಸಾಧನೆಯನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಿದೆವು. ಕೊನೆಗೆ ಈ ಮೈಲಿಗಲ್ಲನ್ನು ಸಾಧಿಸಿದ್ದೇವೆ. ನಂಬಿಕೆಯ ಶಕ್ತಿ ಮತ್ತು ಸಾಮೂಹಿಕ ಪ್ರಯತ್ನಕ್ಕೆ ಇದು ಸಾಕ್ಷಿಯಾಗಿದೆ.'

**■ ವಿಶ್ವವಿದ್ಯಾಲಯ ಸ್ಥಾನಮಾನ ಪಡೆಯುವಲ್ಲಿ ನೀವು ಎದುರಿಸಿದ ಇತರ ಸವಾಲುಗಳು ಯಾವುವು?**

– ವಿಶ್ವವನ್ನೇ ಕಾಡಿದ ಕೋವಿಡ್ 19 ನಮಗೆ ದೊಡ್ಡ ಸವಾಲಾಗಿತ್ತು. ಕೆಲವೊಂದು ನಿಯಂತ್ರಕ ಬದಲಾವಣೆಗಳು ಅಡ್ಡಿಯಾಯಿತು. ಇದಾದ ಬಳಿಕ ಹೊಸ ಶೈಕ್ಷಣಿಕ ನೀತಿ (2020)ರ ಅನುಷ್ಠಾನವು ಮತ್ತೊಮ್ಮೆ ಸವಾಲನ್ನು ನಮ್ಮ ಮುಂದೆ ತಂದಿತು. ಆರಂಭದಲ್ಲಿ 2016ರ ನಿಯಮಗಳ ಅಡಿಯಲ್ಲಿ ವಿಶ್ವವಿದ್ಯಾಲಯದ ಸ್ಥಾನಮಾನಕ್ಕೆ ಅರ್ಜಿ ಸಲ್ಲಿಸಿದರೂ, ನಮ್ಮ ಪ್ರಸ್ತಾಪಕ್ಕೆ ಅರ್ಜಿಗೆ ಕೋವಿಡ್ 19ರ ಸಂದಿಗ್ಧ ಸ್ಥಿತಿಯು ಅಡ್ಡಿಯುಂಟು ಮಾಡಿತು. ಆದಾಗ್ಯೂ ದೇವರ ಆಶೀರ್ವಾದ ಎಂಬಂತೆ ಆಸ್ಕರ್ ಫರ್ನಾಂಡೀಸ್, ಅವರ ಮಗಳು, ಅಶ್ಫಾಕ್ ಮುಂತಾದ ವ್ಯಕ್ತಿಗಳು ನಮ್ಮ ಸಹಾಯಕ್ಕೆ ಬಂದರು. ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದಕ್ಕೆ ಸೂಕ್ತ ಮಾರ್ಗದರ್ಶನ ನೀಡಿದರು. ಉನ್ನತ ಶಿಕ್ಷಣ ಸಚಿವರೊಂದಿಗೆ ಸಮಾಲೋಚನೆ ನಡೆಸಿ, ಹೇಗೆ ಸವಾಲುಗಳನ್ನು ಎದುರಿಸಬಹುದು ಎಂಬ ಮಾರ್ಗದರ್ಶನ ಸಿಕ್ಕಿತು. ಇದು ನಮ್ಮ ಸಂಬಂಧವನ್ನು ವಿಸ್ತರಿಸಲು ಮತ್ತು ಅರ್ಥಪೂರ್ಣ ಸಂಬಂಧಗಳನ್ನು ಬೆಳೆಸಲು ಕಾರಣವಾಯಿತು. ಸವಾಲುಗಳು ಬೆಳವಣಿಗೆಯ ಅವಕಾಶಗಳೆಂದು ಭಾವಿಸಿ ಸ್ವೀಕರಿಸಿದೆ. ಸವಾಲುಗಳಿಂದಾಗಿಯೇ ಸಂಬಂಧ ಮತ್ತು ಗೆಳೆತನವು ವಿಸ್ತಾರಗೊಂಡಿತು. ಹಲವು ಮಂದಿಯ ಪರಿಚಯ, ಗೆಳೆತನ, ಸಂಬಂಧ ಬೆಳೆಯಿತು. ಇದೊಂದು ಆಶೀರ್ವಾದ ಅಥವಾ ವರದಾನ ಎಂದು ಭಾವಿಸುತ್ತೇನೆ.

**■ ಬೆಲ್ಜಿಯಂನಲ್ಲಿ ನಿಮ್ಮ ಅಂತಾರಾಷ್ಟ್ರೀಯ ಸಂಶೋಧನಾ ಅನುಭವವು ವಿಶ್ವವಿದ್ಯಾಲಯದ ಕಾರ್ಯತಂತ್ರದ ಯೋಜನೆಗೆ ಹೇಗೆ ಪೂರಕವಾಗಿವೆ?**

– ಕಲಿಕೆ ಎಂಬುದು ತನ್ನ ಪಾಲಿಗೆ ನಿರಂತರ. ಕಲಿಯುವ ಅಭ್ಯಾಸ ಆಳವಾಗಿ ಬೇರೂರಿದೆ. ನಾನು ಯುರೋಪ್, ಯುಎಸ್ಎ, ಕೆನಡಾ, ಪೋರ್ಚುಗಲ್ ಅಥವಾ ಬೇರೆ ಯಾವುದೇ ದೇಶಕ್ಕೆ ಪ್ರಯಾಣಿಸಿದಾಗ, ನನ್ನ ಮೊದಲ ಪ್ರವೃತಿಯು ಅಲ್ಲಿನ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡುವುದಾಗಿದೆ. ಬೆಲ್ಜಿಯಂನಲ್ಲಿ ಇದ್ದ ವೇಳೆ ನಾನು ಹಲವಾರು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದೇನೆ. ಅವುಗಳ ಕಾರ್ಯಾಚರಣೆಗಳು, ವಿಸ್ತರಣಾ ತಂತ್ರಗಳು ಮತ್ತು ಉತ್ತಮ ಅಭ್ಯಾಸಗಳ ಅನುಷ್ಠಾನವನ್ನು ಅರ್ಥ ಮಾಡಿಕೊಳ್ಳುವಲ್ಲಿ ನನಗೆ ಪ್ರತ್ಯಕ್ಷ ಅನುಭವವನ್ನು ಒದಗಿಸಿದೆ. ಈ ಭೇಟಿಗಳಿಂದ ಪಡೆದ ಅಮೂಲ್ಯ ಒಳನೋಟಗಳು ನಮ್ಮ ಕಾಲೇಜಿನ ಕಾರ್ಯತಂತ್ರದ ಯೋಜನೆಗೆ ನನ್ನ ವಿಧಾನವನ್ನು ಗಾಢವಾಗಿ ಪ್ರಭಾವಿಸಿದೆ. ನಾವು ಜಾರಿಗೆ ತಂದಿರುವ ಹಲವು ಬದಲಾವಣೆಗಳು ಈ ಮಾನ್ಯತೆ ಮತ್ತು ಕಲಿಕೆಯ ಅನುಭವದ ನೇರ ಪರಿಣಾಮವಾಗಿದೆ.

**■ ಗೌರವಾನ್ವಿತ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ಪಡೆದಿರುವುದು ಸಂಭ್ರಮಾಚರಣೆಗೆ ಯೋಗ್ಯವಾದ ಮಹತ್ವದ ಮೈಲಿಗಲ್ಲು. ಅಲೋಶಿಯನ್ ಸಮುದಾಯವು ಈ ಐತಿಹಾಸಿಕ ಸಾಧನೆಯನ್ನು ಹೇಗೆ ಸ್ಮರಿಸಿತು?**

– ಇದು ಅನೇಕರಿಗೆ ಉತ್ಸಾಹ ಮತ್ತು ಅಪನಂಬಿಕೆಯಿಂದ ತುಂಬಿದ ಕ್ಷಣವಾಗಿತ್ತು. ಈ ಗಮನಾರ್ಹ ಸಾಧನೆಯ ಘೋಷಣೆಯ ನಿಜಕ್ಕೂ ಮಾಂತ್ರಿಕ ಎಂದೆನಿಸಿತ್ತು. ಸಂತೋಷಕ್ಕೆ ಪಾರವೇ ಇರಲಿಲ್ಲ. ಘೋಷಣೆಯಾಗುತ್ತಿದ್ದಂತೆ ಎಲ್ಲರೂ ಸಾಮೂಹಿಕವಾಗಿ ದೇವರಿಗೆ ವಿಶೇಷ ಪ್ರಾರ್ಥನೆ ಮಾಡಿ, ಕೃತಜ್ಞತೆ ಸಲ್ಲಿಸಿದೆವು. ಇದಾದ ಬಳಿಕ ಈ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಲು ಸಂಭ್ರಮಾಚರಣೆ ಕಾರ್ಯಕ್ರಮಗಳ ಸರಣಿಯನ್ನು ಆಯೋಜಿಸಲಾಗಿದೆ.

**■ ಶೈಕ್ಷಣಿಕವಾಗಿ ವಿಶ್ವದ ಭೂಪಟದಲ್ಲಿ ಗುರುತಿಸಿಕೊಳ್ಳುವ ಮಂಗಳೂರಿನ ಹಲವಾರು ಶಿಕ್ಷಣ ಸಂಸ್ಥೆಗಳು ಬೆಳೆದು ನಿಂತಿದ್ದರೂ, ಸೈಂಟ್ ಅಲೋಶಿಯಸ್ ಸಂಸ್ಥೆಯು ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯ ಸ್ಥಾನಮಾನದೊಂದಿಗೆ ಹೆಗ್ಗುರುವಾಗಿ ಬೆಳೆದಿದೆ. ಈ ಮಹತ್ವದ ಸಾಧನೆಯ ಹೊರತಾಗಿ ಇತರ ಶಿಕ್ಷಣ ಸಂಸ್ಥೆಗೆ ಹೋಲಿಸಿದರೆ, ಸೈಂಟ್ ಅಲೋಶಿಯಸ್ ವಿಶ್ವವಿದ್ಯಾಲಯ ಹೇಗೆ ಭಿನ್ನವಾಗಿ ಗುರುತಿಸಿಕೊಂಡಿದೆ?**

– ಮೊದಲ ಮತ್ತು ಅಗ್ರಗಣ್ಯವಾಗಿ ಸೈಂಟ್ ಅಲೋಶಿಯಸ್ ಸಂಸ್ಥೆಯು ಜೆಸ್ವಿಟ್ ತತ್ತ್ವಶಾಸ್ತ್ರಕ್ಕೆ ಬದ್ಧವಾಗಿದೆ. ಇದು ಜೀವನದ ಎಲ್ಲಾ ಹಂತದಲ್ಲೂ ದೇವರ ಉಪಸ್ಥಿತಿಯನ್ನು ಕಾಣುತ್ತೇವೆ. ದೇವರು ಎಂಬುದು ಕೇವಲ ಚರ್ಚ್‌ನ ಮಿತಿಗಳಿಗೆ ಸೀಮಿತವಾಗಿಲ್ಲ, ಆದರೆ ಪ್ರತಿ ಮಾನವನ ಹೃದಯಕ್ಕೆ ವಿಸ್ತರಿಸುತ್ತದೆ. ಎರಡನೆಯದಾಗಿ, ನಮ್ಮ ಸಂಸ್ಥೆಯು ಎಲ್ಲಾ ಧರ್ಮ, ವರ್ಗದವರನ್ನು ಗೌರವಿಸುತ್ತದೆ. ಸ್ತ್ರೀ – ಪುರುಷ ಎಂಬ ಭೇದಭಾವ ತೋರದೆ, ಎಲ್ಲರ ಪಾಲ್ಗೊಳ್ಳುವಿಕೆಯ ಮತ್ತು ಪೋಷಿಸುವ ವಾತಾವರಣಕ್ಕೆ ಒತ್ತು ನೀಡಲಾಗುತ್ತದೆ. ಮೂರನೆಯದಾಗಿ, ನಾವು ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುತ್ತೇವೆ. ಶೈಕ್ಷಣಿಕ ಸಾಧನೆಗೆ ಒತ್ತು ನೀಡುತ್ತೇವೆ. ಇದರೊಂದಿಗೆ ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಕ್ರೀಡೆಗಳನ್ನು ಪೋಷಿಸುತ್ತೇವೆ. ನಮ್ಮ ಸಮಗ್ರ ಸಮಾಲೋಚನಾ ವ್ಯವಸ್ಥೆಗಳು ವೈಯಕ್ತಿಕ ಬೆಳವಣಿಗೆ ಮತ್ತು ಪರಿವರ್ತನೆಯನ್ನು ಸುಗಮಗೊಳಿಸುವ ನಮ್ಮ ಬದ್ಧತೆಯನ್ನು ಮತ್ತಷ್ಟು ಒತ್ತಿ ಹೇಳುತ್ತವೆ.

ಬಹುಮುಖ್ಯವಾಗಿ, ನಾವು ವಿಶ್ವವಿದ್ಯಾಲಯದ ಕಾರ್ಯಾಚರಣೆಗಳಿಗೆ ಕಾರ್ಪೊರೇಟ್ ಮಾದರಿ ಅಳವಡಿಸಿಕೊಳ್ಳುವ ಬದಲಾಗಿ, ಜೆಸ್ವಿಟ್ ಸಂಸ್ಥೆಯಾಗಿ ನಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ದೃಢವಾಗಿ ಉಳಿಯುತ್ತೇವೆ. ಅವಶ್ಯಕ ಇರುವ ಜನರಿಗೆ ಹಣಕಾಸಿನ ನೆರವು ನೀಡಲು ಸಂಸ್ಥೆಯು ಬದ್ಧವಾಗಿದೆ. ಭವಿಷ್ಯದಲ್ಲಿ ಇನ್ನಷ್ಟು ಸಮಾಜ ಸೇವೆ ಮಾಡಲು ಸಂಸ್ಥೆಯು ಬದ್ಧವಾಗಿದೆ. ಕೊನೆಯದಾಗಿ, ಪರಿವರ್ತಕ ಅನುಭವಗಳು ಮತ್ತು ಜೀವಿತಾವಧಿಯ ಯಶಸ್ಸಿಗೆ ಅನುಕೂಲವಾಗುವಂತೆ ಸಾಕಷ್ಟು ಸಂಪನ್ಮೂಲಗಳು ಮತ್ತು ಬೆಂಬಲವನ್ನು ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಪ್ರವರ್ಧಮಾನಕ್ಕೆ ಬರಲು ಬೇಕಾದ ವ್ಯವಸ್ಥೆಯನ್ನು ಮಾಡಿದ್ದೇವೆ.

**■ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಒ) ಸಮೀಕ್ಷೆಯ ವರದಿಯಲ್ಲಿ ಉಲ್ಲೇಖಿಸಿರುವ ಪದವಿ ಶಿಕ್ಷಣ ಪಡೆದವರಲ್ಲಿನ ನಿರುದ್ಯೋಗದ ಸವಾಲುಗಳನ್ನು ಸಂತ ಅಲೋಶಿಯಸ್ ವಿದ್ಯಾ ಸಂಸ್ಥೆ ಹೇಗೆ ಎದುರಿಸುತ್ತದೆ?**



**ಇದು ಅನೇಕರಿಗೆ ಉತ್ಸಾಹ ಮತ್ತು ಅಪನಂಬಿಕೆಯಿಂದ ತುಂಬಿದ ಕ್ಷಣವಾಗಿತ್ತು. ಈ ಗಮನಾರ್ಹ ಸಾಧನೆಯ ಘೋಷಣೆಯ ನಿಜಕ್ಕೂ ಮಾಂತ್ರಿಕವಾಗಿತ್ತು. ಸಂತೋಷಕ್ಕೆ ಪಾರವೇ ಇರಲಿಲ್ಲ. ಘೋಷಣೆಯಾಗುತ್ತಿದ್ದಂತೆ ಎಲ್ಲರೂ ಸಾಮೂಹಿಕವಾಗಿ ದೇವರಿಗೆ ವಿಶೇಷ ಪ್ರಾರ್ಥನೆ ಮಾಡಿ, ಕೃತಜ್ಞತೆ ಸಲ್ಲಿಸಿದೆವು. ಇದಾದ ಬಳಿಕ ಈ ಐತಿಹಾಸಿಕ ಮೈಲಿಗಲ್ಲನ್ನು ಗುರುತಿಸಲು ಸಂಭ್ರಮಾಚರಣೆ ಕಾರ್ಯಕ್ರಮಗಳ ಸರಣಿಯನ್ನು ಆಯೋಜಿಸಲಾಗಿದೆ.**

– ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಗಮನವು ಉದ್ಯಮಶೀಲತೆ ಮತ್ತು ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸುವುದರ ಮೇಲೆ ಹೆಚ್ಚು ಕೇಂದ್ರೀಕೃತವಾಗಿದೆ. ಇದು ನಮ್ಮ ಕ್ಯಾಂಪಸ್‌ನಲ್ಲಿ 2–3 ಕಂಪನಿಗಳು ಸ್ಥಾಪನೆಯಾಗಿರುವುದಕ್ಕೆ ಸಾಕ್ಷಿಯಾಗಿದೆ. ನಮ್ಮ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಸುಲಭಗೊಳಿಸಲು ನಾವು ಸುಮಾರು 400 ಕಂಪನಿಗಳೊಂದಿಗೆ ಸಂಪರ್ಕವನ್ನು ಹೊಂದಿದ್ದೇವೆ. ಹೆಚ್ಚುವರಿಯಾಗಿ, ನವೀನ ಆಲೋಚನೆಗಳನ್ನು ಪೋಷಿಸಲು ನಾವು 2 ಇನ್ಕ್ಯುಬೇಶನ್ ಕೇಂದ್ರಗಳನ್ನು ಹೊಂದಿದೆ.


ನಮ್ಮ ಶಿಕ್ಷಣವು ಉದ್ಯೋಗ ಹುಡುಕುವವರಿಗಿಂತ ಹೆಚ್ಚಾಗಿ ಉದ್ಯೋಗ ಒದಗಿಸುವವರನ್ನು ಬೆಳೆಸುವುದರ ಮೇಲೆ ಕೇಂದ್ರೀಕೃತವಾಗಿದೆ. ಏಕೆಂದರೆ ನಾವು ಭರವಸೆಯ ಉದ್ಯಮಗಳಿಗೆ ಬೀಜ ನಿಧಿಯನ್ನು ಒದಗಿಸುತ್ತೇವೆ. ಮಾನವ ನಿರ್ಮಿತ ಸಮಸ್ಯೆಯಾದ ದುರಾಶೆ ಇಂದು ನಾವು ಎದುರಿಸುತ್ತಿರುವ ಅನೇಕ ಜಾಗತಿಕ ಸವಾಲುಗಳ ಮೂಲದಲ್ಲಿದೆ ಎಂದು ನಾನು ದೃಢವಾಗಿ ನಂಬುತ್ತೇನೆ.

**■ ಸಂತ ಅಲೋಶಿಯಸ್ (ಪರಿಗಣಿತ ವಿಶ್ವವಿದ್ಯಾಲಯ)ನ ಭವಿಷ್ಯಕ್ಕಾಗಿ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?**

– ಸೈಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಭವಿಷ್ಯದ ಬಗ್ಗೆ ನಮ್ಮ ದೃಷ್ಟಿಕೋನವನ್ನು ರೂಪಿಸಲು ನಾನು ಉತ್ಸುಕನಾಗಿದ್ದೇನೆ. ಗೋಚರತೆ, ವಿಶ್ವಾಸಾರ್ಹತೆ ಮತ್ತು ಹಕ್ಕುಗಳನ್ನು ರಕ್ಷಿಸುವಲ್ಲಿ ನಾನು ಪತ್ರಿಕೋದ್ಯಮ (ಮಾಧ್ಯಮ), ಸಮಾಜ ಸೇವೆ ಮತ್ತು ಕಾನೂನನ್ನು ಹೆಚ್ಚು ಗೌರವಿಸುತ್ತೇನೆ. ಹೀಗಾಗಿ, ನಮ್ಮ ಸಂಸ್ಥೆಯೊಳಗೆ ಪತ್ರಿಕೋದ್ಯಮ ಮತ್ತು ಸಮಾಜ ಕಾರ್ಯ ವಿಭಾಗಗಳನ್ನು ಹೆಚ್ಚಿಸಲು ಮತ್ತು ಬಲಪಡಿಸಲಾಗುವುದು.

ಈ ಬದ್ಧತೆಗೆ ಹೊಂದಿಕೊಂಡಂತೆ, ನ್ಯಾಯಕ್ಕಾಗಿ ಪ್ರತಿಪಾದಿಸಲು, ಎಲ್ಲಾ ವ್ಯಕ್ತಿಗಳ ಹಕ್ಕುಗಳನ್ನು ಎತ್ತಿಹಿಡಿಯಲು ಮತ್ತು ಸಮಗ್ರತೆ ಮತ್ತು ಸಹಾನುಭೂತಿಯೊಂದಿಗೆ ವಕೀಲ ವೃತ್ತಿಗೆ ಅರ್ಥಪೂರ್ಣ ಕೊಡುಗೆಗಳನ್ನು ನೀಡಲು, ವಿದ್ಯಾರ್ಥಿಗಳಿಗೆ ಅಧಿಕಾರ ನೀಡುವ ಕಾನೂನು ಕೋರ್ಸ್ ಅನ್ನು ಪರಿಚಯಿಸುವ ಉದ್ದೇಶ ಇದೆ.

**(ಶ್ರೀ ಅಬ್ದುಲ್ ರಶೀದ್ ಎ.ಪಿ.ಕೆ., ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮತ್ತು ಮರ್ಯಮ್ ಅಫ್ತಾಬ್ ಕೋಲಾ, ವಿದ್ಯಾರ್ಥಿ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದ ಸ್ನಾತಕೋತ್ತರ ವಿಭಾಗ)**



ಮಂಗಳೂರು ಧರ್ಮಾಧ್ಯಕ್ಷ ವಂದನೀಯ ಡಾ. ಪೀಟರ್ ಪೌಲ್ ಸಲ್ದಾನಾ ಹಾಗೂ ಇತರ ಧರ್ಮಾಧ್ಯಕ್ಷರುಗಳು ಮತ್ತು ಧರ್ಮಗುರುಗಳೊಂದಿಗೆ ಸಂತ ಅಲೋಶಿಯಸ್ ಸಂಸ್ಥೆಗೆ ಪರಿಗಣಿತ ವಿಶ್ವವಿದ್ಯಾಲಯ ಸ್ಥಾನಮಾನ ದೊರೆತ ಸಂದರ್ಭ ಕೃತಜ್ಞತಾ ಬಲಿಪೂಜೆ ಸಲ್ಲಿಸಿದರು.

ಐದು ಬಾರಿ ಶಾಸಕ, ಸಚಿವರಾಗಿ ಪ್ರಮುಖ ಖಾತೆಗಳನ್ನು ನಿರ್ವಹಿಸಿ, ಈಗ ವಿಧಾನಸಭೆ ಸ್ಪೀಕರ್ ಆಗಿರುವ ಯು.ಟಿ.ಖಾದರ್ ಅವರು ಅಲೋಶಿಯಸ್ ಕಾಲೇಜಿನಲ್ಲಿ ಕಲಿಯುವಾಗಿನ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

# ವ್ಯಕ್ತಿತ್ವ ರೂಪಿಸಿದ ಅಲೋಶಿಯಸ್

ನಾನು ವೆಲೆನ್ಸಿಯಾದ ಜೆರೋಸಾ ಶಾಲೆಯಲ್ಲಿ ಒಂದರಿಂದ ನಾಲ್ಕನೇ ತರಗತಿ ತನಕ ಕಲಿತಿದ್ದೆ. ಅಲ್ಲಿ ಕೋ ಎಜುಕೇಶನ್ ನಿಲ್ಲಿಸಿದ ಕಾರಣಕ್ಕೆ ಐದನೇ ತರಗತಿಗೆ ಕೊಡಿಯಾಲ್ ಬೈಲ್‌ನ ಅಲೋಶಿಯಸ್ ಶಾಲೆಗೆ ಬಂದು ಸೇರಿದ್ದೆ. ನಾನು ಶಾಸಕನ ಮಗನಾಗಿದ್ದರೂ, ಪ್ರವೇಶ ಸಿಗಲು ಕಷ್ಟವಿತ್ತು. ಅಪ್ಪ ನಾಲ್ಕು ಬಾರಿ ಶಾಲೆಗೆ ಪ್ರಿನ್ಸಿಪಾಲರ ಎದುರು ಕೂತು, ಸೀಟು ಮಾಡಿಸಿಕೊಟ್ಟು ಹೋಗಿದ್ದರು.

ನಮ್ಮ ಮನೆ ಬೆಂದೂರ್‌ವೆಲ್‌ನಲ್ಲಿತ್ತು. ಅಲ್ಲಿಂದ ಅಲೋಶಿಯಸ್‌ಗೆ ಟೆಂಪೊದಲ್ಲಿ ಬೆಳಗ್ಗೆ 7.30ಕ್ಕೆ ಬರುತ್ತಿದ್ದೆವು. ಅಲ್ಲಿ ಆಗಲೇ ಫಾದರ್ ನೊರೊನ್ಹ ಬಂದು ಕೈ ಕಟ್ಟಿ ನಿಲ್ಲುತ್ತಿದ್ದರು. ನಮ್ಮಿಂದ ಇಡೀ ಅಂಗಳ ಗುಡಿಸಿ, ಸ್ವಚ್ಛ ಮಾಡಿಸುತ್ತಿದ್ದರು. ನಂತರ ಎರಡನೇ ಟೆಂಪೊ ಬರುವ ತನಕ ಆಟವಾಡುತ್ತಿದ್ದೆವು.

ನಾಲ್ಕರಿಂದ ಏಳನೇ ತನಕದ ವಿದ್ಯಾರ್ಥಿಗಳನ್ನು ಸೇರಿಸಿ, ನಾನಾ ಹೌಸ್‌ಗಳನ್ನು ಮಾಡಲಾಗಿತ್ತು. ದೈಹಿಕ ಶಿಕ್ಷಣ ಶಿಕ್ಷಕ ಬಾಲಕೃಷ್ಣ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ನಾವು 10 ಜನದ ತಂಡ ಸಂಜೆ ಶಾಲೆ ಬಂದ್ ಆಗುವ ತನಕವಿದ್ದು, ಆಟವಾಡಿ ಮನೆಗೆ ಹೋಗುತ್ತಿದ್ದೆವು. ಏಳನೇ ತರಗತಿಯಲ್ಲಿ ಚುನಾವಣೆ ನಡೆಸದೆ, ನಿಧೀಶ್ ಶೆಟ್ಟಿಯನ್ನು ಸ್ಕೂಲ್ ಲೀಡರ್ ಮಾಡಿದ್ದೆವು.

ಐದನೇ ತರಗತಿಯಲ್ಲೇ ಸ್ಕೌಟ್‌ನಲ್ಲಿ ಸಕ್ರಿಯನಾಗಿದ್ದೆ. ಒಂದು ದಿನ ತರಗತಿ ಹೋಗದೆ, 15 ಮಂದಿಗೆ ಗೆಳೆಯರು ಪಣಂಬೂರು ಬೀಚ್‌ಗೆ ಹೋಗಿದ್ದೆವು. ಮರುದಿನ ಕೇಳಿದಾಗ, ಒಬ್ಬೊಬ್ಬರು ಒಂದೊಂದು ಕಾರಣ ನೀಡಿದರು. ಸ್ಕೌಟ್‌ನಲ್ಲಿದ್ದವರು ಸುಳ್ಳು ಹೇಳಬಾರದು ಎಂಬ ಕಾರಣಕ್ಕೆ ನಾನು ಬೀಚ್‌ಗೆ ಹೋದ ವಿಷಯ ತಿಳಿಸಿದೆ. ನನಗೆ ರಾಷ್ಟ್ರಪತಿ ಬಾಡ್ಜ್ ಸಿಗಲು ಸಿದ್ಧತೆ ನಡೆದಿತ್ತು. ಕ್ಲಾಸ್‌ಗೆ ಬಾರದೇ ಬೀಚ್‌ಗೆ ಹೋದ ಕಾರಣ, ರಾಷ್ಟ್ರಪತಿ ಬ್ಯಾಡ್ಜ್ ಸಿಗುವುದು ತಪ್ಪಿ ಹೋಯಿತು. ಕ್ಷಮೆ ಕೇಳಿದರೆ ಸಿಗುವ ಅವಕಾಶವಿತ್ತು. ಸ್ವಾಭಿಮಾನ ಬಿಡದೆ, ಕ್ಷಮೆ ಕೇಳಲು ಹೋಗಿಲ್ಲ.

ದೈಹಿಕ ಶಿಕ್ಷಣ ಶಿಕ್ಷಕ ಬೆಂಜಮಿನ್ ಅವರು ಬೆಳಗ್ಗೆ ಆರು ಗಂಟೆಗೆ ಶಾಲೆಗೆ ಕರೆಸಿ, ಫುಟ್ಬಾಲ್ ತರಬೇತಿ ನೀಡುತ್ತಿದ್ದರು. ಅವರು ನೀಡುವ ಪ್ರತಿದಿನದ ಮಾಲ್ಟ್, ವಾರಕ್ಕೊಮ್ಮೆ ಕೊಡುವ ಮಸಾಲೆ ದೋಸೆ ನಮಗೆ ಹೆಮ್ಮೆಯ ವಿಚಾರ. ಶಾಲೆಯ ಮೇಲಿನ ಹಾಲ್‌ನಲ್ಲಿ ರೆಕ್ಟರ್ ರೋನಿ ಪ್ರಭು ಅವರಿಂದ ಪ್ರತಿದಿನ ಒಂದು ಗಂಟೆ ಧ್ಯಾನ. ಅದರಲ್ಲಿ ಐ ಕ್ಯಾನ್..., ಐ ವಿಲ್... ಎಂಬುದನ್ನು 100 ಬಾರಿ ಹೇಳಬೇಕು.

8ರಿಂದ 10ನೇ ತರಗತಿಗೆ ಮತ್ತೆ ಅಲೋಶಿಯಸ್ ಹೈಸ್ಕೂಲ್ ಸೇರಿದೆ. ಕಲಿಕೆಗಿಂತ ಫುಟ್‌ಬಾಲ್, ಹಾಕಿ, ಬಾಸ್ಕೆಟ್ ಬಾಲ್‌ನಲ್ಲಿ ಹೆಚ್ಚು ಆಸಕ್ತಿ. ಫುಟ್‌ಬಾಲ್ ಪಂದ್ಯಾಟ ನೋಡಲು ನೆಹರು ಮೈದಾನಕ್ಕೆ ಹೋಗುತ್ತಿದ್ದೆವು.ಅನೇಕ ಬಾರಿ ರಾತ್ರಿ ಮನೆಗೆ ಹೋಗುವಾಗ ಪೆಟ್ಟು ಬಿದ್ದದ್ದೂ ಇದೆ. ಶಾಲೆಯಲ್ಲಿ ಫಾದರ್ ವಿಕ್ಟರ್ ಒಂದು ಡಬ್ಬಿ ಇಟ್ಟು, ಅದಕ್ಕೆ ಬೀಳುವ 5-10 ಪೈಸೆಗೆ ತಮ್ಮ ಪಾಲು ಸೇರಿಸಿ, ಬಡ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಬಡಿಸುತ್ತಿದ್ದರು. 10ನೇ ತರಗತಿಯಲ್ಲಿ ಸಾಧಾರಣ ಅಂಕಗಳೊಂದಿಗೆ ಉತ್ತೀರ್ಣನಾಗಿದ್ದೆ.

ನನ್ನ ಅಣ್ಣಂದಿರು ಡಾಕ್ಟರ್, ಎಂಜಿನಿಯರ್. ನನಗೆ ಕಡಿಮೆ ಅಂಕ ಬಂದಿತ್ತು. ಶೇ.70 ಅಂಕ ಬಂದಿದ್ದ ಗೆಳೆಯರು ವಿಜ್ಞಾನ ವಿಭಾಗಕ್ಕೆ ಸೇರಿದರೆಂಬ ಕಾರಣಕ್ಕೆ ಧೀರಜ್, ಅಜ್ಮಲ್, ಅರುಣ್ ಪಂಡಿತ್, ಸಮ್ಮಿತ್ ಚಾಂದ್, ಪ್ರೀತಂ ಶೆಟ್ಟಿ ಜತೆ ನಾನೂ ಪಿಯುಸಿಯಲ್ಲಿ ಸೈನ್ಸ್ ತೆಗೆದುಕೊಂಡಿದ್ದೆವು. ತರಗತಿಗೆ ಹೋದರೆ ಗಣಿತ, ವಿಜ್ಞಾನ ಒಂಚೂರೂ ಅರ್ಥವಾಗುತ್ತಿರಲಿಲ್ಲ. ಪಾಠ ಅರ್ಥವಾಗದೆ ಕಾಲೇಜಿಗೆ ಹೋಗಲು ಮನಸ್ಸಾಗುತ್ತಿರಲಿಲ್ಲ. ಗಣಿತ ಶಿಕ್ಷಕ ಬಾಸ್ಕೋ ಅವರ ತರಗತಿಯಲ್ಲಿ ಮಾಡಿದ ರಗಳೆ, ತುಂಟಾಟಕ್ಕೆ ಲೆಕ್ಕವಿಲ್ಲ. ಕೊನೆಗೆ ಹೇಗೂ ಒಂದು ವರ್ಷ ತೆಗೆಯೋಣವೆಂದು ನಿರ್ಧರಿಸಿ, ಬೆಳಗ್ಗೆ ಕಾಲೇಜು, ಮಧ್ಯಾಹ್ನ ಮಂಗುಳಿಯ ಚರ್ಮುರಿ ಅಂಗಡಿ, ಸಂಜೆ ಬಲ್ಮಠ ಮೈದಾನದಲ್ಲಿ ಆಟ ನಮ್ಮ ದಿನಚರಿಯಾಗಿತ್ತು.

ಸಯನ್ಸ್ ಬೇಡವೆಂದು ಒಂದು ವರ್ಷ ಮುಗಿದ ಬಳಿಕ ಮತ್ತೆ ಫಸ್ಟ್ ಪಿಯುಸಿಯಲ್ಲಿ ಆರ್ಟ್ಸ್ ತೆಗೆದುಕೊಂಡು ಮೂಡುಬಿದಿರೆಯ ಮಹಾವೀರ ಕಾಲೇಜು ಸೇರಿದೆ. ಪಿಯುಸಿ ಮುಗಿದ ಬಳಿಕ ಮಂಗಳೂರು ಎಸ್‌ಡಿಎಂ ಕಾಲೇಜಿನಲ್ಲಿ ಕಾನೂನು ಪದವಿ ಪಡೆದೆ. ಕಲಿಯುವಾಗಲೇ ಜೇಷ್ಠ ಪಡಿವಾಳ್, ಅರಣ್ ಬಂಗೇರ, ಸುಭಾಸ್ ಸೇರಿಕೊಂಡು ಎಂ.ಆರ್.ಬಲ್ಲಾಳ್ ಅವರಿಂದ ತರಬೇತಿ ಪಡೆದಿದ್ದೆವು. ಹಿರಿಯ ವಕೀಲ ಸೀತಾರಾಮ ಶೆಟ್ಟಿ ಅವರಲ್ಲಿ ಆರು ತಿಂಗಳ ಕೆಲಸ ಮಾಡಿ, ನಂತರ ರಾಜಕೀಯಕ್ಕೆ ಬಂದೆ. ಈ ಶಿಕ್ಷಣ ಸಂಸ್ಥೆಗಳು ನನ್ನ ಬದುಕಿಗೆ ಬಹಳಷ್ಟು ಕೊಡುಗೆ ನೀಡಿವೆ.

■ ಮುಹಮ್ಮದ್ ಆರಿಫ್ ಪಡುಬಿದ್ರಿ






> **ನನ್ನ ಶಿಕ್ಷಣ, ಕ್ರೀಡಾಸಕ್ತಿ , ಸಮಾಜಸೇವೆ ಸಹಿತ ಒಟ್ಟು ವ್ಯಕ್ತಿತ್ವ ರೂಪಿಸುವಲ್ಲಿ ಅಲೋಶಿಯಸ್ ಕಾಲೇಜಿನ ಆಡಳಿತ ಮಂಡಳಿ, ಅಂದಿನ ಶಿಕ್ಷಕರು, ಮಿತ್ರರು, ಕ್ಯಾಂಪಸ್ ಪ್ರಮುಖ ಪಾತ್ರ ವಹಿಸಿದೆ. ಅಂದಿನ ಓದು, ಆಟ, ಓಟ, ತುಂಟಾಟ ಜೀವನಕ್ಕೆ ಬಹಳಷ್ಟು ಅನುಭವ ನೀಡಿದೆ. ನಾನಿಂದು ಏನು ಆಗಿದ್ದೇನೋ ಅದರಲ್ಲಿ ನಾನು ಕಲಿತ ಶಾಲೆಗಳ ಪ್ರೋತ್ಸಾಹ ಮರೆಯಲು ಸಾಧ್ಯವಿಲ್ಲ.**
>
> **-ಯು.ಟಿ.ಖಾದರ್.**

# ಇಫ್ತಿಕರ್ ಬದುಕಿಗೂ ಅಲೋಶಿಯಸ್ ಪೂರಕ

ಮಂಗಳೂರಿನ ಅಲೋಶಿಯಸ್ ಶಿಕ್ಷಣ ಸಂಸ್ಥೆಯಲ್ಲಿ 5ರಿಂದ ಪಿಯುಸಿ ತನಕ ಕಲಿತಿರುವ ಯು.ಟಿ. ಫರೀದ್ ಫೌಂಡೇಶನ್‌ನ ಅಧ್ಯಕ್ಷರಾಗಿರುವ ಯು.ಟಿ.ಇಫ್ತಿಕರ್ ಅವರು, ಇಂದು ಪ್ರಮುಖ ಶಿಕ್ಷಣ ಸಲಹೆಗಾರರಾಗಿ ಗುರುತಿಸಿಕೊಂಡಿದ್ದಾರೆ.

ಅಲೋಶಿಯಸ್‌ನ ಹಳೆ ವಿದ್ಯಾರ್ಥಿಯೊಬ್ಬರು ಪ್ರಥಮ ಬಾರಿಗೆ ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿರುವುದು ಇತಿಹಾಸ. ನಂತರ ಸಿಂಡಿಕೇಟ್ ಸದಸ್ಯ, ಬೋರ್ಡ್ ಸದಸ್ಯರಾಗಿ ಗಮನ ಸೆಳೆದಿದ್ದಾರೆ.

ಮಂಗಳೂರಿನ ಡಾ.ಎಂ.ವಿ.ಶೆಟ್ಟಿ ಗ್ರೂಪ್ ಆಫ್ ಕಾಲೇಜಸ್‌ನ ಡೀನ್, ದ ಇಂಡಿಯನ್ ಅಸೋಸಿಯೇಶನ್ ಆಫ್ ಫಿಸಿಯೋಥೆರಪಿಸ್ಟ್ಸ್ ಕರ್ನಾಟಕ ಇದರ ಅಧ್ಯಕ್ಷ, ಸ್ಪೋರ್ಟ್ಸ್ ಆ್ಯಂಡ್ ಫಿಟ್ನೆಸ್ ಟ್ರೈನಿಂಗ್ ಫೆಡರೇಶನ್ ಆಫ್ ಇಡಿಯಾದ ಅಧ್ಯಕ್ಷರಾಗಿದ್ದಾರೆ.

'ನಾವು ಅಲೋಶಿಯಸ್ ಕಾಲೇಜಿನ ಹಳೆ ವಿದ್ಯಾರ್ಥಿಗಳು ಹೆಮ್ಮೆ ಇದೆ. 150 ವರ್ಷಗಳ ಇತಿಹಾಸವಿರುವ ಅಲೋಶಿಯಸ್ ಕಾಲೇಜು ಮಂಗಳೂರಿನ ಹೃದಯ ಭಾಗದ ಅತೀ ಎತ್ತರ ಪ್ರದೇಶದಲ್ಲಿದ್ದು, ಮುಂದಿನ ದಿನಗಳಲ್ಲಿ ಸಂಪೂರ್ಣ ಮೆಡಿಕಲ್ ಸೈನ್ಸ್ ಕೋರ್ಸ್ ಸಹಿತ ದೇಶದ ಪ್ರಮುಖ ಶಿಕ್ಷಣ ಸಂಸ್ಥೆಯಾಗಿ ಬೆಳೆಯಬೇಕು' ಎಂದು ನಮ್ಮ ಒತ್ತಾಸೆ ಎನ್ನುತ್ತಿದ್ದಾರೆ ಯು.ಟಿ.ಇಫ್ತಿಕರ್.




**Prof. U T Ifthikar Fareed**
BPT., MPT., Ph.D(MPR)

- Syndicate Member, Rajiv Gandhi University of Health Sciences, Bengaluru, Karnataka
- Chairman, U T Fareed Foundation
- Dean, Dr.M.V.Shetty Group of Colleges, Mangalore
- Former Senate Member, Rajiv Gandhi University of Health Sciences, Bengaluru, Karnataka
- President, The Indian Association of Physiotherapists Karnataka
- President, Sports & Fitness Training Federation of India.

# Shining through time: A 144 year journey of Education, Enlightenment and Inspiration of St Aloysius (Deemed to be University)

■ **Anna Elizabeth Tom**



The First Independence Day celebration at St. Aloysius College, Mangalore, in 1947

"Education is the movement from darkness to light" as eloquently articulated by Allan Bloom, an American Philosopher and a classicist, this expression sees its's resonance in the legacy of St. Aloysius College. Guided by the motto "Lucet et Ardet," meaning 'Shine to Enkindle,' the institution has ceaselessly illuminated minds, kindling the flames of knowledge and igniting the path towards intellectual and holistic development.

When the college was first established in 1880 in the beautiful city of Mangalore, Karnataka, it was an upper secondary school with just 150 pupils and two dedicated instructors, Fr. Joseph Willy and Fr. Scholastic Postlewhite. With time it grew into a prestigious institution, and in January 2024 the University Grants Commission (UGC) granted it the university status. This transition from a small institution to an esteemed university is a testament to the college's persistent dedication.

The roots of St. Aloysius College trace back to the year 1858 when the Catholic community of Mangalore petitioned Pope Leo XIII to commission the Mangalore Mission to the Society of Jesus. The community, primarily comprised of migrants from Goa, who sought to instil Western-style education in Mangalore. The Pope sanctioned their request in 1878, and nine Jesuits from Venice arrived through Mumbai to Mangalore on December 31, 1878.

Under the leadership of Fr. Joseph Willy in 1880, the first rector and principal of the college the institution started its journey using a private bungalow, belonging to Mrs. Mary Magdalene Coelho as the first class room. The elder Fr. Willy and the younger Fr. Postlewhite worked diligently for the noble cause of establishing an educational institution in Mangalore and the students affectionately called the duo, Abraham and Isaac.

Fr. Angelo Mutti one of the first nine Jesuits, played a pivotal role in the construction of the college buildings in nine acres of land donated by Mr. Lawrence Lobo Prabhu atop Edyah Hill. The design was inspired by the oratory of St. Philip Neri in Rome.The stately building was formally opened on 15 February 1885 and Fr. Joseph Willy SJ , a well-known educationist in Bombay and Karachi became first Principal of the College. In 1882, the College was affiliated to the Madras University and as early as in 1892, it secured the First Rank in B.A.

In 1899, Brother Antonio Moscheni, a gifted artist, graced the College Chapel with his masterpieces, immortalising the lives of Jesus and saints through his exquisite paintings. The Chapel, often compared to the Vatican's Sistine Chapel, is a global destination for spiritual inspiration, attracting thousands of visitors from around the world. And for thousands of pupils throughout generations, it has continued to be a source of spiritual inspiration.

As decades unfolded, St. Aloysius College embarked on a transformative journey, blending innovation with unwavering commitment to its foundational principles. In 1908, amid the backdrop of India's struggle for independence and Mangalore's growing educational and trade aspirations, St. Aloysius College introduced its Science Block, signalling a commitment to modern education and scientific inquiry. The college saw various developments like establishment of the College Band in 1910, The establishment of the St. Aloysius College Museum, known as "Aloyseum," in 1913 initiated by Fr. Chiapi, an Italian Jesuit with collection of minerals, a herbarium, and Roman coins generously gifted by Collegio Vieta in Italy and the inauguration of the New Extension Block in 1946 which currently stands as admin block of the University.

When the Evening College was founded in 1966, it became a ray of light in the face of economic inequality, giving working and economically underprivileged students a lifeline. This initiative, which enrolled 160 students in its first year, greatly facilitated access to education for people juggling employment and school obligations. Because of its success, other universities around the country were motivated to implement similar approaches to meet the requirements of non-traditional students, thereby fostering greater inclusivity and opportunity within the education system.

In 1986, St. Aloysius College opened its doors to female students, marking a landmark milestone amid changing social conventions and the cry for gender equality. This move was a reflection of Mangalore's progressive stance towards gender inclusion and education, as well as India's expanding social fabric. St. Aloysius College was one of the first coeducational colleges in Mangalore, setting the benchmark for inclusivity and equal educational opportunities for male and female students in the coastal region of Dakshina Kannada.

St. Aloysius College embarked on a momentous journey into the world of computers in 1985 with the inception of the Aloysius Institute of Computer Sciences, pioneering the revolution in computer education in Mangalore and Dakshina Kannada. The subsequent decades witnessed remarkable strides, including the inauguration of the IT Block in 2003 currently named after Fr Angelo Maffei, with its foundation stone laid by Sri Narayana Murthy, Founder of Infosys, in 2000. This visionary move was further honoured by the presence of Dr. A.P.J Abdul Kalam, President of India, who inaugurated the IT Block alongside Sri George Fernandes, an esteemed alumnus and then Defence Minister of India.

*(Continued to next page)*




The front gate of St.Aloysius Deemed to be University.

*(Continued from Previous Page)*

Furthermore, the establishment of Aloysius Institute of Management and Information Technology (AIMIT) in 2008 and the launch of Community Radio Sarang in 2009 showcased St. Aloysius College's continual pursuit of innovation, inspiring other institutions to follow suit and strive for excellence in education and technological advancement.

An important turning point in the history of St. Aloysius College occurred in 2007 when the affiliated college became autonomous, opening the door to an infinite amount of creative freedom. With this newfound independence, St. Aloysius College (Autonomous) became known for its intellectual acumen and for paving a trail for other universities to follow, encouraging them to embrace innovation and strive for autonomy.

St. Aloysius College has consistently demonstrated a commitment to excellence in education, as evidenced by its series of notable achievements. Since 2009, the institution has held the prestigious designation of a "College with Potential for Excellence" by the University Grants Commission, a testament to its dedication to academic and overall development. Moreover, in 2015, the University Grants Commission recognised St. Aloysius College by awarding it the esteemed "DDU Kaushal Kendra" for offering B. Vocational programs, a distinction reserved for only a selected few institutions nationwide.

Recognised for its scholarly achievements, St. Aloysius College has been named one of India's top 25 science colleges for three years consecutively by the esteemed weekly publication "The Week." The institution attained an impressive "A++" Grade with a CGPA of 3.67 out of 4 in the Fourth Cycle of NAAC Accreditation in January 2023, proving its persistent commitment to upholding high standards of education and institutional excellence.

Furthermore, despite being in the tier-III city of the country St. Aloysius College's commitment to excellence is underscored by



its commendable position in the NIRF-2023 Ranking by the Ministry of Education. Ranked 80 among colleges in India, with a place among the top two colleges in Karnataka, the institution continues to uphold its reputation as one of the premier educational institutions in the country educating more than 7000 students studying 21 Post graduate and 38 undergraduate courses along with six PG diploma programmes in its portals.

Over 144 years, St. Aloysius College has undergone an incredible journey of growth and transformation, starting with its modest origins as a secondary school. The elevation of St. Aloysius College to St. Aloysius (Deemed to be University) by the UGC in January 2024 is a testament to its enduring legacy and pursuit of excellence. This remarkable development demonstrates the institution's adaptability and durability in changing educational scenarios. As it enters this new phase, the university stands as a beacon of inspiration and opportunity, shining to enkindle the hearts and minds of its students and thereby the future generation of India.

Anna Elizabeth Tom (Post Graduate student, MA Journalism and Mass Communication, St Aloysius Deemed to be University)



The administration block of the University.






ESTD : 1880
ಸೈಂಟ್ ಅಲೋಶಿಯಸ್
ಪರಿಗಣಿತ ವಿಶ್ವವಿದ್ಯಾಲಯ

# ಭಾಷೆ, ಕಲೆ, ಸಂಸ್ಕೃತಿಗಳನ್ನು ಕಟ್ಟಿದ ಮಹಾನ್ ಸಂಸ್ಥೆ

**ಅಲೋಶಿಯಸ್ ಕಾಲೇಜಿನ ಭಾಷಾ ವಿಭಾಗಗಳು ತೆಗೆದುಕೊಳ್ಳುವ ಶೈಕ್ಷಣಿಕ ತೀರ್ಮಾನಗಳಿಗೆ ರಾಜ್ಯಮಟ್ಟದಲ್ಲಿ ಬೆಲೆ ಇತ್ತು. ಹಿಂದಿ, ಸಂಸ್ಕೃತ ವಿಭಾಗಗಳಲ್ಲೂ ಶ್ರೇಷ್ಠ ವಿದ್ವಾಂಸರಿದ್ದರು. ಈ ಎಲ್ಲ ಭಾಷೆಗಳಿಗೆ ಸಂಬಂಧಿಸಿ ಲೈಬ್ರೆರಿಯಲ್ಲಿ ದೊಡ್ಡ ಸಂಖ್ಯೆಯ ಗ್ರಂಥಗಳಿರುವುದು ಹೆಮ್ಮೆಯ ವಿಚಾರ. ಸ್ವಾತಂತ್ರ್ಯ ಪೂರ್ವ ಕಾಲದ ಹಳೆಯ ಅಮೂಲ್ಯ ಪುಸ್ತಕಗಳು ಇಲ್ಲಿಯ ವಾಚನಾಲಯದಲ್ಲಿ ಅತ್ಯಂತ ಸುರಕ್ಷಿತವಾಗಿ ಇದ್ದು, ಅಧ್ಯಯನಕ್ಕೆ ಲಭ್ಯ. ಪಿಎಚ್‌ಡಿ ಮಾರ್ಗದರ್ಶಕರು ಇಲ್ಲಿಯ ಇಂಗ್ಲಿಷ್, ಹಿಂದಿ, ಕನ್ನಡ ವಿಭಾಗಗಳಲ್ಲಿ ಇದ್ದಾರೆ. ಇಂಗ್ಲೀಷ್‌ನ ಸ್ನಾತಕೋತ್ತರ ಎಂಎ ಕಲಿಕೆಯು ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿದೆ.**

■ **ಅನಿಕೇತನ್**

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಹಿನ್ನಲೆ ನೋಡಿದರೆ ಕಳೆದ ಒಂದೂವರೆ ಶತಮಾನದಲ್ಲಿ ಸಂಸ್ಥೆಯು ಭಾಷೆ, ಕಲೆ, ಸಂಸ್ಕೃತಿಗಳಿಗೆ ಹಲವಾರು ರೀತಿಯ ಬಹುಮುಖ್ಯ ಕೊಡುಗೆಗಳನ್ನು ನೀಡಿದೆ. ಒಂದು ವಿದ್ಯಾಸಂಸ್ಥೆಯು ಪದವೀಧರರನ್ನು ಉತ್ಪಾದಿಸುವುದಷ್ಟೇ ಆಗಬಾರದು, ಕೇವಲ ತನ್ನ ಆರ್ಥಿಕ ಸಂಪತ್ತು ಬೆಳೆಸಿ ಬೃಹತ್ ಕಟ್ಟಡಗಳಷ್ಟೇ ಆಗಬಾರದು. ವಿದ್ಯಾಸಂಸ್ಥೆಯು ನಾಡು, ನುಡಿ, ಕಲೆ, ಭಾಷೆ, ಸಂಸ್ಕೃತಿಗಳನ್ನು ಬೆಳೆಸುವ ಮೂಲಕ ಮಾನವೀಯ ಮೌಲ್ಯಗಳನ್ನು ಕೊಟ್ಟಿದೆ–ಎಂಬುದು ಒಂದು ಸಂಸ್ಥೆಯ ಆತ್ಮಶಕ್ತಿಯಾಗಿ ನಿಲ್ಲುತ್ತದೆ. ಅಲೋಶಿಯಸ್ ವಿದ್ಯಾಸಂಸ್ಥೆ ಅಂದೊಡನೆ ನೆನಪಿಗೆ ಬರುವುದು ಇದರ ಭಾಷಾ ವಿಭಾಗಗಳು.

## ಸಮೃದ್ಧ ಭಾಷಾ ವಿಭಾಗ

ಕನ್ನಡ, ಕೊಂಕಣಿ, ಮಲೆಯಾಳ, ಹಿಂದಿ, ಇಂಗ್ಲೀಷ್, ಸಂಸ್ಕೃತ, ಫ್ರೆಂಚ್–ಹೀಗೆ ನಾಡಿನ ಮತ್ತು ವಿಶ್ವ ಭಾಷೆಗಳ ಕಲಿಕೆ ಇಲ್ಲಿ ನಡೆಯುತ್ತಿದೆ. ಕೊಂಕಣಿ ಭಾಷೆಯ ಆರಂಭಿಕ ನಿಘಂಟು, ವ್ಯಾಕರಣ ಕಟ್ಟಿದ ಜೆಸ್ವಿಟ್ ಫಾದರ್ ರೆ।ಫಾ। ಮಫ್ಫೈ ಇಲ್ಲಿಯವರು. ಕೊಂಕಣಿ ಭಾಷೆ ಮತ್ತು ಸಂಸ್ಕೃತಿಗಳ ಕಲೆಗಳ ಕೆಲಸಕ್ಕಾಗಿ ಕೊಂಕಣಿ ಸಂಸ್ಥೆ ದುಡಿಯುತ್ತಿದೆ. ಕೊಂಕಣಿಯ ಸಂಶೋಧನಾ ಪತ್ರಿಕೆ ಮತ್ತು ಪದವಿಯಲ್ಲಿ ಪೂರ್ಣ ಪ್ರಮಾಣದ ಕೊಂಕಣಿ ದ್ವಿತೀಯ ಭಾಷಾ ಕಲಿಕೆಯು ಸಂಸ್ಥೆಯ ಕೊಡುಗೆ. ಮಲಯಾಳಂ ಭಾಷೆಗೆ ಸಂಬಂಧಿಸಿ ಸಮೃದ್ಧ ವಾಚನಾಲಯ ಇದ್ದು, ಶ್ರೇಷ್ಠ ಮಲಯಾಳಿ ಪಂಡಿತರು ಇಲ್ಲಿ ಗುರುಗಳಾಗಿದ್ದರು. ಕೇರಳದ ರಾಜಮನೆತನಕ್ಕೆ ಸೇರಿದ ಇಂಗ್ಲಿಷ್ ಪ್ರೊಫೆಸರುಗಳನ್ನು ಹೊಂದಿದ್ದ ಈ ಸಂಸ್ಥೆಯು, ವ್ಯಕ್ತಿತ್ವ ವಿಕಸನ, ರಂಗಭೂಮಿ ಮುಂತಾದ ಕ್ಷೇತ್ರಗಳಲ್ಲಿ ಪರಿಣತರಾದ ಆಂಗ್ಲ ಅಧ್ಯಾಪಕರ ತಂಡವನ್ನೇ ಹೊಂದಿತ್ತು.

ಅಲೋಶಿಯಸ್ ಕಾಲೇಜಿನ ಭಾಷಾ ವಿಭಾಗಗಳು ತೆಗೆದುಕೊಳ್ಳುವ ಶೈಕ್ಷಣಿಕ ತೀರ್ಮಾನಗಳಿಗೆ ರಾಜ್ಯಮಟ್ಟದಲ್ಲಿ ಬೆಲೆ ಇತ್ತು. ಹಿಂದಿ, ಸಂಸ್ಕೃತ ವಿಭಾಗಗಳಲ್ಲೂ ಶ್ರೇಷ್ಠ ವಿದ್ವಾಂಸರಿದ್ದರು. ಈ ಎಲ್ಲ ಭಾಷೆಗಳಿಗೆ ಸಂಬಂಧಿಸಿ ಲೈಬ್ರೆರಿಯಲ್ಲಿ ದೊಡ್ಡ ಸಂಖ್ಯೆಯ ಗ್ರಂಥಗಳಿರುವುದು ಹೆಮ್ಮೆಯ ವಿಚಾರ. ಸ್ವಾತಂತ್ರ್ಯ ಪೂರ್ವ ಕಾಲದ ಹಳೆಯ ಅಮೂಲ್ಯ ಪುಸ್ತಕಗಳು ಇಲ್ಲಿಯ ವಾಚನಾಲಯದಲ್ಲಿ ಅತ್ಯಂತ ಸುರಕ್ಷಿತವಾಗಿ ಇದ್ದು, ಅಧ್ಯಯನಕ್ಕೆ ಲಭ್ಯ. ಪಿಎಚ್‌ಡಿ ಮಾರ್ಗದರ್ಶಕರು ಇಲ್ಲಿಯ ಇಂಗ್ಲಿಷ್, ಹಿಂದಿ, ಕನ್ನಡ ವಿಭಾಗಗಳಲ್ಲಿ ಇದ್ದಾರೆ. ಇಂಗ್ಲಿಷಿನ ಸ್ನಾತಕೋತ್ತರ ಎಂಎ ಕಲಿಕೆಯು ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿದೆ.

## ಕ್ಯಾಂಪಸ್ಸೇ ಒಂದು ಮಹಾ ಕಲಾಗ್ಯಾಲರಿ:

ರೆ। ಮೊಸ್ಕೆನಿಯವರ ಜಗದ್ವಿಖ್ಯಾತ ಭಿತ್ತಿ ಚಿತ್ರಗಳ ಚಾಪೆಲ್ ಇಲ್ಲಿಯ ಪ್ರಧಾನ ಆಕರ್ಷಣೆ. ಮೊಸ್ಕೆನಿಯವರು ಭಿತ್ತಿಚಿತ್ರಗಳಷ್ಟೇ ಶ್ರೇಷ್ಠವಾದ, ಅಷ್ಟೇ ಮಹತ್ವದ, ಕಾಗದ ಮಾಧ್ಯಮದ 'ಚಿಕಣಿ ಚಿತ್ರ ಕಲೆ'ಗಳನ್ನು ಸೃಷ್ಟಿ ಮಾಡಿದ್ದರು. ಎಂಟು ಸಂಪುಟಗಳಲ್ಲಿ ಈ ಅಗಾಧ ಕಲಾರಾಶಿಯು ಇಲ್ಲಿಯ ಮ್ಯೂಸಿಯಂನಲ್ಲಿದೆ. ಬಹುಜನರು ತಿಳಿಯದ ಈ ಕಲಾಸಂಪತ್ತು ಅಪೂರ್ವ, ಅಮೂಲ್ಯ. ಜಾಗತಿಕ ಮನ್ನಣೆಗಾಗಿ ಈ ಎಂಟು ಸಂಪುಟಗಳು ಕಾಯುತ್ತಿವೆ.

ಕ್ಯಾಂಪಸ್ಸಿನ ಕಟ್ಟಡಗಳ ಪುರಾತನ ವಾಸ್ತು ವಿನ್ಯಾಸ, ಸಿಮೆಂಟ್ ಬರುವ ಕಾಲಕ್ಕಿಂತ ಹಿಂದಿನ ವಾಸ್ತು ನಿರ್ಮಾಣದ ತಂತ್ರಜ್ಞಾನಗಳು ಕೂಡಾ ಅಪೂರ್ವ ಕಲಾಕೃತಿಗಳು. ಒಂದೂವರೆ ಶತಮಾನದಷ್ಟು ಹಳೆಯ ಸಂಸ್ಥೆಯಾದ್ದರಿಂದ ಇಲ್ಲಿಯ ವಿಜ್ಞಾನ ಉಪಕರಣಗಳು, ವಿಜ್ಞಾನದ ಮಾದರಿ ಸಂಗ್ರಹಗಳು, ಹಳೆಯ ಕಾಗದ ಪತ್ರಗಳು–ಹೀಗೆ ಪ್ರತಿಯೊಂದೂ 'ಆಂಟಿಕ್' ಆದಂಥವು. 'ಚಾಪೆಲ್ ಮತ್ತು ಮ್ಯೂಸಿಯಂ' ಕಲೆಯ ಅವಳಿ ನಕ್ಷತ್ರಗಳಾಗಿ ಈ ಕ್ಯಾಂಪಸ್ಸಿನಲ್ಲಿ ಮೆರೆಯುತ್ತಿವೆ. ಲೈಬ್ರೆರಿಯ ಪುರಾತನ ಗ್ರಂಥಗಳು ದೇಶದಲ್ಲೇ ಮಹತ್ವದ 'ಆಂಟಿಕ್' ಕಲಾಕೃತಿಗಳು.

## ಭಾಷಾ ವೈವಿಧ್ಯ– ಭಾಷಾ ಸಾಮರಸ್ಯ:

ಕ್ಯಾಂಪಸ್ಸಿನ ಉದ್ದಕ್ಕೂ ಸಾಗುವಾಗ ತುಳು, ಕೊಂಕಣಿ, ಮಲಯಾಳ, ಬ್ಯಾರಿ, ಕೊಡಗು, ಈಶಾನ್ಯ ಭಾರತದ ನುಡಿಗಳು, ಹಿಂದಿ, ಇಂಗ್ಲಿಷ್ ಹೀಗೆ ಹತ್ತಾರು ಭಾಷೆಗಳು ನಮ್ಮ ನಡಿಗೆಯ ಅಡಿಗಡಿಗೆ ಕಿವಿಗೆ ಬೀಳುವಂತೆ ವೈವಿಧ್ಯ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಹಳ್ಳಿ ಹಿನ್ನೆಲೆಯಿಂದ ಬಂದ ಯಾವುದೇ ಭಾಷಾ ಹಿನ್ನೆಲೆಯ ವಿದ್ಯಾರ್ಥಿಗೂ ತನ್ನ ಬೆಳವಣಿಗೆಗೆ ಯಾವ ತೊಂದರೆಯೂ ಆಗದೆ ಅವರ ವ್ಯಕ್ತಿತ್ವದ ವಿಕಸನವು ಇಲ್ಲಿ ಆಗಬಲ್ಲುದು.

## ಕಲಾಕಲಿಕೆಗೆ ಪ್ರಾಮುಖ್ಯ:

ಬಿ.ಎ ಕಲಿಕೆಗೂ ಈ ವಿದ್ಯಾಸಂಸ್ಥೆಯು ಬಹಳ ಗಮನ ಕೊಟ್ಟಿದೆ. ಮಾನವಿಕಗಳ, ಕಲಾಕಲಿಕೆಗೆ ದೊಡ್ಡ ಪ್ರಮಾಣದ ವಿದ್ಯಾರ್ಥಿಗಳಿದ್ದಾರೆ. ಸ್ಟುಡಿಯೋಗಳು, ಡಿಜಿಟಲ್ ಉಪಕರಣಗಳು, ಹದಿನೈದರಷ್ಟು ವೇದಿಕೆ–ಸಭಾಂಗಣಗಳು, ವಿದ್ಯಾರ್ಥಿಗಳ ಪ್ರಾಯೋಗಿಕ ಕಲಿಕೆಗಾಗಿ ವಿವಿಧ ಸಮೂಹ ತಾಣಗಳು– ಹೀಗೆ ಇಲ್ಲಿಯ ಬಿ.ಎ ಕಲಿಕೆ ಬಹಳ ಚೇತೋಹಾರಿ. ಸಾಹಿತ್ಯ, ರಂಗಭೂಮಿ, ಸಿನಿಮಾ, ರೇಡಿಯೋ ಕಲಿಕೆಗೆ ಇಲ್ಲಿ ಅವಕಾಶಗಳು ಲಭ್ಯ.


ಅಲೋಶಿಯಸ್ ಪರಿಗಣಿತ ವಿವಿಯ ಕಲಿಕೆಯು ಕೇವಲ ಪದವಿ ಕೊಡುವುದು ಮಾತ್ರ ಅಲ್ಲ, ಅದು ಭಾಷೆ, ಕಲೆ, ಸಂಸ್ಕೃತಿಗಳ ಬಗ್ಗೆ ಸಿಗುವ ದೊಡ್ಡ ಜೀವನಾನುಭವ ಆಗಿರುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದ ಅಮೂಲ್ಯ ನೆನಪಾಗಿ ಉಳಿಯುತ್ತದೆ.

(Dr Mahalinga bhat (Aniketan) is a Associate Professor of Kannada, Dept of Kannada, St Aloysius Deemed to be University)

## ಪುರಾತನವೂ ಆಧುನಿಕವೂ ಆದ ಕನ್ನಡ ವಿಭಾಗ

**ಸಂಸ್ಥೆಯ ಸ್ಥಾಪನೆಯ ದಿನದಿಂದಲೇ ಕನ್ನಡ ವಿಭಾಗವನ್ನು ತೆರೆಯಲಾಗಿದೆ. ಕನ್ನಡ ವಿಭಾಗಕ್ಕೆ ನೂರ ನಲುವತ್ತೈದು ವರ್ಷ ಸಮೀಪಿಸುತ್ತಿದೆ. ಸ್ವತಃ ರೆ।ಫಾ। ಮುಲ್ಲರ್ ಅವರಿಂದ ಹೋಮಿಯೋಪತಿ ಕಲಿತು ರೋಗಿಗಳ ಸೇವೆ ಮಾಡಿದ ಕನ್ನಡ ಪಂಡಿತರು ಇಲ್ಲಿದ್ದರು. ಮಾನಸಿಕ ಕಾಯಿಲೆಯೂ ಸೇರಿ ವಿವಿಧ ಔಷಧೋಪಚಾರಗಳನ್ನು ಉಚಿತವಾಗಿ ಮಾಡುತ್ತಿದ್ದ ಸೇವಾ ಮನೋಭಾವದ ಪುರಾತನ ಕನ್ನಡ ಪಂಡಿತರ ಸೇವೆ ಸ್ಮರಣೀಯವಾದುದು. ಮುಳಿಯ ತಿಮ್ಮಪ್ಪಯ್ಯ ಮತ್ತು ಸೇಡಿಯಾಪು ಕೃಷ್ಣಭಟ್ಟರ ಸಂಶೋಧನೆಗಳು ಜಾಗತಿಕ ಮನ್ನಣೆ ಗಳಿಸಿದಂಥವು. ಅನುವಾದ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ಉನ್ನತ ಮನ್ನಣೆಗಳಿಸಿದ ನಾ. ದಾಮೋದರ ಶೆಟ್ಟರು ನಮ್ಮವರು. ಪ್ರೊ. ಅಮೃತ ಸೋಮೇಶ್ವರರು ಇಲ್ಲಿದ್ದಾಗಲೇ ಅವರ ಜಾನಪದ ಕ್ಷೇತ್ರದ ಮೊದಲ ಕೃತಿಗೆ ಕೇಂದ್ರ ಸರಕಾರದ ಪ್ರಶಸ್ತಿ ಬಂತು. ಕನ್ನಡ ಐಚ್ಛಿಕವನ್ನು ಪದವಿಯಲ್ಲಿ ಕಲಿಸುವುದನ್ನು ಕಳೆದ ಮೂವತ್ತೆಂಟು ವರ್ಷಗಳಿಂದ ಕನ್ನಡ ವಿಭಾಗವು ಮಾಡುತ್ತಿದೆ. ಯಕ್ಷಗಾನ, ರಂಗಭೂಮಿ, ಗ್ರಂಥ ಪ್ರಕಟಣೆಗಳ ಕ್ಷೇತ್ರದಲ್ಲಿ ದೊಡ್ಡ ಕೊಡುಗೆಯನ್ನು ವಿಭಾಗವು ಕೊಟ್ಟಿದೆ.**

**ಹೊಸಕಾಲಕ್ಕೆ ಅನುಗುಣವಾಗಿ ಕನ್ನಡ ಭಾಷೆಯ ಡಿಜಿಟಲ್ ಸ್ವರೂಪವೂ ಬೆಳೆದಿದೆ. ಕನ್ನಡ ವಿಭಾಗದಿಂದ ಡಿಜಿಟಲ್ ಕನ್ನಡ, ವಿವಿಧ ಉನ್ನತ ಸ್ಪರ್ಧೆಗಳಿಗೆ ಸಂಬಂಧಿಸಿ ಸ್ಪರ್ಧಾ ಕನ್ನಡ ತರಬೇತಿ ಇದೆ. ಅವಿಕಿಪೀಡಿಯನ್ಸ್‌ಟಿ ಆಗಿ ಕನ್ನಡ ವಿದ್ಯಾರ್ಥಿಗಳನ್ನು ಬೆಳೆಸಲಾಗುತ್ತಿದೆ. ರಂಗ ಅಧ್ಯಯನ ಕೇಂದ್ರವು ನಾಟಕ ಕ್ಷೇತ್ರದಲ್ಲಿ ದೊಡ್ಡ ಕೆಲಸ ಮಾಡುತ್ತಿದ್ದು ವಿದ್ಯಾರ್ಥಿಗಳಿಗೆ ರಂಗ ಮತ್ತು ಅಭಿನಯ ಕ್ಷೇತ್ರದಲ್ಲಿ ಡಿಪ್ಲೊಮಾ ಪದವಿ ನೀಡುತ್ತಿದೆ.**



ಸಂತ ಅಲೋಶಿಯಸ್ ಪ್ರಕಾಶನದ ಕನ್ನಡದ ಕೃತಿಗಳು.






ಸೈಂಟ್ ಅಲೋಶಿಯಸ್ ವಿಶ್ವವಿದ್ಯಾಲಯದಲ್ಲಿ ನಡೆದ ಒಂದು ವಾರದ ರಂಗ ಹಬ್ಬದಲ್ಲಿ ಖ್ಯಾತ ಚಲನಚಿತ್ರ ನಟರಾದ ಶ್ರೀ ನಾನಾ ಪಾಟೇಕರ್ ಹಾಗೂ ಶ್ರೀ ಪ್ರಕಾಶ್‌ರಾಜ್ ಪಾಲ್ಗೊಂಡು ಗಮನಸೆಳೆದರು.

# Alumni/ae Role in the making of St Aloysius (Deemed to be University)

■ **Naveen Mascarenhas**

January 19, 2024, is a day to remember for St Aloysius Institutions, Mangaluru. On this day, the good news arrived from the Ministry of Education, Government of India, which, on the advice of the University Grants Commission (UGC) under Section 3 of the UGC Act 1956, declared St. Aloysius College (Autonomous), Mangaluru, as St. Aloysius (Deemed to be University). The present digital media swiftly disseminated this news to the entire world, and within minutes, good wishes and compliments began pouring in from all corners, especially from the alumni circle. Everyone commenced reminiscing, recollecting, and rejoicing the long journey covered since the submission of the application for university status in November 2017.

The days of inspection of the proposal, February 1st and 2nd, 2019, were of great importance, as the UGC/AICTE team scrutinized the facilities available on campus for the College to qualify as a university. It was during this period that the alumni played a vital role by interacting with the team in support of the proposal. Eminent personalities from the region, who were illustrious alumni of the institution, visited the campus to advocate for the claims made by the College in its proposal. The alumni association of the College, St. Aloysius College Alumni Association (SACAA), organized this meeting, and SACAA provided a written assurance to the team that any financial implications arising from the new status, exceeding the receipts made by the institution, would be met through various fundraising programs, philanthropic activities, and networking. It is important to note here that the new university requires more physical space to accommodate new academic structures, programs, and facilities for enhanced research activities. The new university will emphasize research activities with a global vision and local focus.

The pandemic era from 2020 to 2022 slowed down the approval process of the proposal at various levels. Once that hurdle was overcome, the alumni joined hands with the College authorities, especially the alumni from the 1971 batch, who took a keen interest alongside Fr (Dr) Praveen Martis SJ, the then Principal of the College, to follow up on the proposal in New Delhi. It was due to the goodwill of many alumni of the Jesuit family who have assumed key roles at the government level and elsewhere, as well as the Jesuits who run this institution, that the proposal could see the light of day in the form of the declaration of the college as a Deemed to be University.

The Golden reunions organized at the College, starting from the 1970 batch onwards, helped the institute build its physical and research infrastructure. Major projects contributed by Aloysius alumni include the Advanced Instrumentation Center developed at the LCRI Block in 2022, the Benjamin Memorial Sports Foundation established for the promotion of sports among the youth of the college and the region in 2023, and the Olympic-standard swimming pool built in 2016.

St. Aloysius Alumni Association (SACAA) is a registered body under the Co-operative Societies Act, bearing registration number 105/99-2000, and has nearly 13,000 life members. It was established in 1908 as the Old Boys Association and was renamed SACAA in 1989.

The hallmark of Jesuit education in India and the world is its strong, well-knit alumni associations. SACAA is a member of the Jesuit Alumni Associations of India (JAAI) at the national level and the World Union of Jesuit Alumni (WUJA) at the international level. This provides ample opportunities for students and alumni of Jesuit institutes to network and collaborate. Currently, there are four Jesuit Universities in India, including St. Aloysius, Mangaluru, and all have very strong alumni bodies. The alumni take a keen interest in the progress of the institution by contributing their time to participate in major activities, mentoring students, and supporting the administration in various endeavors. They stand by the institution in every crisis situation and assist the leadership in taking control.

SACAA has been organizing the eminent Aloysian award biennially since 2008. This year, in 2024, it has started felicitating young alumni achievers as well, by presenting the 'Aloysian Youth Icon' Award. So far, 45 senior alumni and 5 young alumni members have been bestowed with these respective prestigious awards. These programs have brought significant visibility to the alumni association.

SACAA also honors the staff of the institution for their meritorious service of 25 years, organizes medical camps and sports events for the staff, and conducts talks for students, staff, and the general public, in addition to the grand Annual Reunion held every year on the Foundation Day of the Institution celebrated on the 12th of January.

The newly formed St. Aloysius Deemed to be University is in its transition stage, with the first batch commencing in July 2024. The university's First Vice Chancellor is Rev. Dr. Praveen Vijaya Martis SJ, who is also the Director of SACAA. His perseverance and steadfast leadership undoubtedly played a significant role in the College achieving this long-desired and fitting title. Now, with the support of all stakeholders, including alumni, and the visionary leadership of the Jesuits, the newborn university is gearing up to embrace new opportunities and challenges. The alumni association, with its motto "To give and not count the cost," is delighted to be part of this great transition and encourages the public of this region to seize any opportunities that the university may offer.

Finally, to the alumni of this institution, remember that "Aloysius is your Alma Mater," and as such, you are and will be her torchbearers. Long live St. Aloysius (Deemed to be University), Mangaluru!

Mr Naveen Mascarenhas
(Assistant Professor, Dept of Computer Science,
St Aloysius Deemed to be University)

Congratulations
to
ST ALOYSIUS
(DEEMED TO BE UNIVERSITY)
ESTD : 1880
MANGALURU 575003 - INDIA
Institute of Management and IT - AIMIT
You have unlocked the next level of education in Mangalore and we are proud of you.
A tremendous achievement of Jesuits in Mangalore, your dedication and hard work have set you on the new challenging path to success.
Best wishes and greetings from
Michael D'Souza and Family
Dubai / Mangalore

ST ALOYSIUS PRE-UNIVERSITY COLLEGE
MANGALURU
ELEVATE YOUR FUTURE AT SAPUC!

AT ST ALOYSIUS EXCELLENCE AND OPPORTUNITY BLEND TO CREATE FOR YOU A BRILLIANT FUTURE!
0824-2449716/17 staloysiuspuc@gmail.com staloysiuspuc.in

# ALUMNI/AE- TORCH BEARERS OF ST ALOYSIUS DEEMED TO BE UNIVERSITY


■ **Fr William Marcel Rodrigues, SJ**

In the bustling coastal city of Mangalore, where tradition meets modernity, St. Aloysius College, affectionately referred to by its alumni who once walked the portals of this esteemed institution, has reached another milestone by attaining the status of a Deemed to be University. It stands as a beacon of academic excellence, nestled amidst lush greenery and steeped in history. This venerable institution has not only shaped minds but also nurtured leaders across diverse fields. Delving into the annals of its illustrious history, we uncover a tapestry of remarkable individuals who have left an indelible mark on society - the eminent alumni of St. Aloysius Deemed to be University.

With regular meetings or reunions of different batches of students who associate themselves with St. Aloysius Institutions, today they are proud that their Alma Mater has achieved success in becoming a University. Some of them have become renowned educationists. The political circles in India, especially in Karnataka, have been enriched with determined and seasoned individuals in governance and public service groomed through the portals of St. Aloysius institutions. Alumni like Justice Santhosh Hedge have made their alma mater proud with their integrity and dedication to the cause of justice. Many have pursued careers in banking, with some even rising to become CEOs, adding to the prestige of Mangalore being hailed as the cradle of the banking sector in India. Eminent personalities like Aravind Adiga are not only acclaimed authors but also notable philanthropists. A host of renowned academicians and versatile entrepreneurs, who have made significant contributions to the country, bringing pride to their alma mater. Many have ventured into healthcare, providing top-notch facilities across the world. The entertainment industry has benefited from the versatile talents that graced the campus with their glamour and acting skills.

## SOME PROMINENT ALUMINI/AE OF ST ALOYSIUS DEEMED TO BE UNIVERSITY


**Late Dr T M A Pai,**
Founder, Manipal University
Educationalist


**Late George Fernandes,**
Former Defence Minister
Politician


**Aravind Adiga,**
Winner of Man Booker
Prize,2009 Author


**K V Kamath,**
Former Chairman, ICICI Bank
(Banker)



**K K Venugopal,**
15th Attorney General Of India
(Jurist)


**Dr Vinaya Hegde,**
Founder, Nitte University
(Educationalist)


**Justice Santhosh Hegde,**
Former Lokayuktha, Govt of
Karnataka (Jurist)


**Maxwell Periera-Kamath,**
Joint Police Commissioner
Traffic, Delhi (Public Service)


**Dr Devi Prasad Shetty,**
Renowned Cardiologist Surgeon,
Pholonthrophist (Health Care)


**Anantha Krishna,**
Non-Executive Chairman,
Karnataka Bank (Banker )


**Jayaram Bhat,**
Executive Director, Karnataka
Bank (Banker)



**Albert Tauro,**
Former CMD Vijaya Bank
(Banker)


**Allan Pereira,**
Former Chairman & MD, Bank
of Maharastra (Banker)



**Janardhan Poojary,** (Politician)
Former Union Finance and Rural
development Minister for State


**Dr N K Thingalya,**
Former, CMD Syndicate Bank
(Banker)


**M V Nair,**
Former Chairman & MD, Union
Bank Of India (Banker)


**Dr Y Abdul Kunhi,**
Founder, Yenepoya University
(Educationalist)


**Dr. Thumbay Moideen,**
Founder, President of Thumbay
Group, Dubai, UAE (Health Care)


**Dr. Ullas Karanth,**
Leading Tiger Conservationist
(Eco Scientist )


**Prof. K Chidananda Gowda,**
Former VC, Kuvempu
University (Academician)


**Padma Shree Ananth Agarwal,**
Professor MIT(USA), CEO of
EDX (Academician)


**Prof. Raghurama G,**
Director BITS Pilani Goa
Campus (Academician)


**Dr Shantharam Shetty,**
Pro- Chancellor, Nitte University
(Orthopaedic Surgeon, Health Care)


**Mahabaleshwara Rao,**
CMD, Karnataka Bank
(Banker)

*Contd..*

# AIMIT'S MANAGEMENT AND IT DESTINATION

## Equipping Oneself to Pursue Dreams with Knowledge and Courage

■ **Kiran Cotha**



"Aloysius Institute of Management & Information Technology (AIMIT) is the place to find the right tools, knowledge, and understanding on how to maximize your potential, giving you a competitive advantage and turning your prospects into real opportunities." – Subesh Sebastian.

"The world outside is highly competitive, and the college prepares you well to showcase or present yourself with utmost confidence to deal with everything that comes your way when you are choosing your career path in the IT industry." – Jeevan KA.

*AIMIT isn't merely an educational institution; it's a nurturing ecosystem where minds are ignited, talents are honed, and dreams are realized. With its blend of academic rigour, practical exposure, and a supportive community, AIMIT prepares students not just for the challenges of the professional world but also for a life imbued with purpose and meaning. AIMIT isn't just shaping future professionals; it's shaping compassionate leaders, innovative thinkers, and responsible global citizens.*

"Faculty – the real heroes of AIMIT who give wings to our dreams. Our life is never a question mark when they are around us." - Asha Hegde.

"My journey at AIMIT was a tapestry of enriching experiences. Beyond the classroom, the institute fostered a culture of innovation through industry collaborations and hands-on projects. However, what truly set AIMIT apart was its vibrant student community. Whether engaging in spirited debates or collaborating on social initiatives, every interaction was a lesson in teamwork and leadership. AIMIT isn't just a college; it's a springboard propelling students towards their aspirations, equipped not just with knowledge but also with the courage to chase their dreams." – Joel Fernandes

This is what the eminent alumni/ae of Aloysius Institute of Management and Information Technology (AIMIT) say about their alma mater, a beacon of academic excellence and holistic growth. They feel that as students, stepping onto its verdant campus was like entering a realm where their aspirations were nurtured and dreams found wings.

St. Aloysius Institute of Management and Information Technology (AIMIT), under the aegis of St. Aloysius (Deemed to be University), Mangalore, offers advanced programs in IT and MBA. As an experienced IT and Management professional, it has always believed in the power of continuous learning and professional development. The campus is located at Beeri, Ullal, about 12 kilometres from the city. The sprawling campus with state-of-the-art facilities and corridors of learning, adorned with creativity and aesthetics, was the brainchild of Karnataka Jesuits, led by Fr. Denzil Eugene Lobo, SJ. With its scintillating artworks, paintings, and artefacts donated by generous donors, it leaves you spellbound while nurturing creative entrepreneurship and tech-savvy minds. It's a campus with a difference, with lush green covers attracting fauna of 50 or more bird species, as per a recent campus bird count, and an enchanting green cover meticulously planned across the campus.

Here are a few of AIMIT's distinctive practices that our institution's stakeholders find admirable:

*(Contd. to Next Page)*



The aerial view of the AIMIT Campus.


The AIMIT Admin Block

(Contd. from Previous Page)

The diversity contributes significantly to the vitality that permeates AIMIT work environments. In order to achieve shared objectives, staff, educators, and students from various backgrounds, ages, and groups of individuals join together here.

Together, they work to create an atmosphere that celebrates variety and fosters an inclusive culture. The strong feeling of mission and community permeating every school, department, program, and organization on campus motivates our educators, staff, and students at AIMIT. It is a thriving learning, teaching, research, and intellectual activity powerhouse. AIMIT culture supports carrying out staff and students' duties while simultaneously pushing for excellence.

It's a well-deserved destination for business enthusiasts, entrepreneurs, and techno-savvies. Here are a few reasons St. Aloysius (Deemed to be University) is a destination to pursue MBA and IT programs:

**Reputation for Excellence:**
AIMIT has a stellar reputation for providing high-quality education and producing industry-ready professionals. You would be thrilled to be part of such a prestigious institution known for its academic excellence.

**Diverse Curriculum:**
The MBA program's comprehensive curriculum, covering areas such as Strategic Management, Finance, Marketing, and Human Resource Management, aligns perfectly with the career goals of the students pursuing professional courses. Additionally, the IT courses offer cutting-edge knowledge and skills in data analytics, cybersecurity, and IT project management, which are highly relevant in today's tech-driven world.

**Experienced Faculty:**
The faculty's expertise and industry experience at our University will enhance students' employability and skills. Learning from professionals with hands-on experience in their respective fields will undoubtedly enrich their educational journey.

**Networking Opportunities:**
We value networking opportunities, including interactions with industry leaders, alumni networks, and career development workshops. Building a robust professional network is crucial for advancing today's competitive job market.

**Facilities and Resources:**
Our institution's state-of-the-art facilities, including modern classrooms, labs, and libraries, create an ideal learning environment that fosters academic growth and creativity.

In conclusion, AIMIT isn't merely an educational institution; it's a nurturing ecosystem where minds are ignited, talents are honed, and dreams are realized. With its blend of academic rigour, practical exposure, and a supportive community, AIMIT prepares students not just for the challenges of the professional world but also for a life imbued with purpose and meaning. AIMIT isn't just shaping future professionals; it's shaping compassionate leaders, innovative thinkers, and responsible global citizens. It's more than a campus; it's a home where aspirations are embraced, potentials are unleashed, and futures are crafted. AIMIT Mangalore is a living example of the transformational power of education and the seemingly endless possibilities that await those who dare to dream big.

[Dr (Fr) Kiran Cotha, SJ, is a Director Designate of AIMIT, St Aloysius Deemed to be Univesity, Mangaluru]

Congratulations to St. Aloysius College on achieving Deemed to be University status.
WE One
AQUA CENTRE
St Aloysius Swimming Pool
Mangalore Ph.: 9632042117

Congratulations to St. Aloysius College on achieving Deemed to be University status

Louis J. Pinto
Mangalore

CONGRATULATIONS
to St. Aloysius College on achieving Deemed to be University status

ROY
CONSTRUCTIONS
CONSULTANTS & CONTRACTORS

Congratulations to St.Aloysius College on achieving Deemed to be University Status
Why Us?
Automation technologies has partnered with world-class Technology Solution providers and Manufacturers to provide a basket of compelling, relevant, proven and best-of-the-breed solutions which are relevant for current customer challenges. Following are the offerings and associations of Automation technologies.
Automation Technologies
Professionals for IT solutions
Since 2009
Solutions & Services
Computers
Servers / Storage
Datacenter
Internet / Data Security
Surveillance
AV Solutions
Managing Partner:
Mr. Vinay Karat
+91 9972532651
vinay@automationtech.in
Partner:
Mr. Arun Pinto
+91 9611129503
arun@automationtech.in
Partner:
Mr. Prasanna Kumara
+91 9611132781
prasanna@automationtech.in
Our reputed clients
Karnataka Bank Ltd.
HDCC Bank
M.C.C. BANK LTD.
MESCOM
ONGC MRPL
Campco
epsilon carbon
GLOW TOUCH
MANIPAL UNIVERSITY
YENEPOYA UNIVERSITY
KLE Technological University
NITTE Nitte University
Father Muller Medical College Hospital
St Aloysius College Mangalore
AUTOMATION TECHNOLOGIES
#2 Santhrupthi, 2nd Cross, Mangalanagar, Mangaladevi, Mangalore - 575001
info@automationtech.in
www.automationtech.in

# ಹಳೆ ವಿದ್ಯಾರ್ಥಿಗಳ ನೆನಪಿನಂಗಳದಿಂದ

**ಅಲೋಶಿಯಸ್ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದ ವಿದ್ಯಾಭ್ಯಾಸ, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಿಗುತ್ತಿದ್ದ ಸಮಾನ ಅವಕಾಶ ಮತ್ತು ಪ್ರೋತ್ಸಾಹ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅನುವು ಮಾಡಿಕೊಡುತ್ತಿತ್ತೆಂದು ನಂಬಿದವನು ನಾನು. ಪಠ್ಯದಷ್ಟೆ ಪಠ್ಯೇತರ ಚಟುವಟಿಕೆಗಳಿಗೂ ಇಲ್ಲಿ ಸಮಾನವಾದ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿತ್ತು. ಇದರಿಂದಾಗಿ ಮುಂದಿನ ಜೀವನವನ್ನು ನಾವು ಹೆಚ್ಚಿನ ಆತ್ಮ ವಿಶ್ವಾಸದೊಡನೆ ಎದುರಿಸಿ ಅದರಲ್ಲಿ ಯಶಸ್ವಿಯಾಗುವುದು ಸಾಧ್ಯವಾಗುತ್ತಿತ್ತು.**

■ **ಎನ್.ಜಿ.ಮೋಹನ್**




ನಮ್ಮ ದೇಶದಲ್ಲಿ ಸಹಸ್ರಾರು ವಿದ್ಯಾಸಂಸ್ಥೆಗಳು ವಿದ್ಯಾಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಎಲ್ಲಾ ವಿದ್ಯಾ ಸಂಸ್ಥೆಗಳ ಪ್ರಮುಖ ಉದ್ದೇಶ, ಶೈಕ್ಷಣಿಕವಾಗಿ ಉನ್ನತ ಮಟ್ಟದ ವಿದ್ಯಾಭ್ಯಾಸವನ್ನು ತಮ್ಮ ವಿದ್ಯಾರ್ಥಿಗಳಿಗೆ ನೀಡಬೇಕೆಂಬುದು ಮತ್ತು ಆ ಮೂಲಕ ತಮ್ಮ ಸಂಸ್ಥೆಗೆ ಅತ್ಯುತ್ತಮ ಮನ್ನಣೆ ಸಿಗಬೇಕೆಂಬುದು. ಅಂತಹ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಮುಂದುವರಿಯುತ್ತಿರುವ ಸಂಸ್ಥೆಗಳು ಶೈಕ್ಷಣಿಕ ಮಟ್ಟದ ಬಗ್ಗೆ ಹೆಚ್ಚಿನ ಗಮನವನ್ನು ಕೊಡುತ್ತವೆ. ಅಂತಹ ಸಂಸ್ಥೆಗಳಲ್ಲಿ ಕಲಿತು ಉನ್ನತ ಅಂಕಗಳೊಡನೆ ತೇರ್ಗಡೆಗೊಳ್ಳುವ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಾಧನೆಯನ್ನಂತು ಖಂಡಿತವಾಗಿ ಮಾಡಿರುತ್ತಾರೆ. ಆದರೆ ಜೀವನದ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಬೇಕಾದ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯನ್ನು ಅವರು ಪಡೆಯುತ್ತಾರೆಯೆ ಎಂಬುದು ಒಂದು ಜಿಜ್ಞಾಸೆಯಾಗಿಯೇ ಉಳಿಯುತ್ತದೆ. ಇಂತಹ ಸಂಸ್ಥೆಗಳ ನಡುವೆ ಸಂತ ಎಲೋಶಿಯಸ್ ಒಂದು ವಿಭಿನ್ನ ಸಂಸ್ಥೆಯಾಗಿ ನಮಗೆ ಗೋಚರಿಸುತ್ತದೆ.

ಎಲೋಶಿಯಸ್ ವಿದ್ಯಾಸಂಸ್ಥೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೆರಡಕ್ಕೂ ಸಮಾನ ರೀತಿಯ ಅವಕಾಶವನ್ನು ತನ್ನ ವಿದ್ಯಾರ್ಥಿಗಳಿಗೆ ಕೊಡ ಮಾಡುವ ಮೂಲಕ ಅವರ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ವಿದ್ಯಾಭ್ಯಾಸ ದೊರಕುವಂತೆ ಮಾಡುತ್ತದೆ. ತನ್ಮೂಲಕ INSTITUTION WITH A DIFFERENCE ಎನ್ನುವ ಖ್ಯಾತಿಯನ್ನು ಗಳಿಸಿದೆ.

ನಮ್ಮ ಪಠ್ಯಕ್ರಮದಲ್ಲಿ ನೀತಿ ಬೋಧೆ ಪಿರಿಯಡ್ ಇರುತ್ತಿತ್ತು. ಜೀವನದ ಪಾಠವನ್ನು ಇಲ್ಲಿ ಕಲಿಸಲಾಗುತ್ತಿತ್ತು. ಮಾರ್ಗದಲ್ಲಿ ನಡೆಯುವಾಗ ಬಲ ಬದಿಯಲ್ಲೆ ನಡೆಯಬೇಕು ಏಕೆಂದರೆ ಎದುರಿನಿಂದ ಬರುವ ವಾಹನ ನಮಗೆ ಕಾಣುವುದರಿಂದ ಸುರಕ್ಷಿತರಾಗಿ ನಡೆಯುವುದು ಸಾಧ್ಯ. ಮಾರ್ಗವನ್ನು ದಾಟುವ ಮೊದಲು ಮಾರ್ಗದ ಬದಿಯಲ್ಲಿ ನಿಂತುಕೊಂಡು ಇಬ್ಬದಿಯಿಂದ ಬರುವ ವಾಹನಗಳನ್ನು ವೀಕ್ಷಿಸಿ ಸುರಕ್ಷಿತ ಸಮಯದಲ್ಲಿ ಮಾರ್ಗವನ್ನು ದಾಟಬೇಕು, ಅರ್ಧ ಮಾರ್ಗವನ್ನು ಕ್ರಮಿಸಿದ ಬಳಿಕ ಬಲ ಭಾಗಕ್ಕೆ ಪುನಃ ನೋಡಿ ವಾಹನ ಬರುತ್ತಿಲ್ಲವೆಂಬುದನ್ನು ಖಾತರಿ ಪಡಿಸಿ ಮುಂದುವರಿಯಬೇಕು (ಆ ಕಾಲದಲ್ಲಿ ಮಂಗಳೂರಿನ ಹೆಚ್ಚಿನೆಲ್ಲ ರಸ್ತೆಗಳು ಕಿರಿದಾಗಿದ್ದು, ಏಕರಸ್ತೆಗಳಾಗಿದ್ದವು.) ಸಭೆ ಸಮಾರಂಭಗಳಲ್ಲಿ ಊಟಕ್ಕೆ ಕುಳಿತಾಗ, ದೊಡ್ಡ ಗಾತ್ರದ ಎಲೆ ಬೇಕು ಎನ್ನುವ ಕಾರಣಕ್ಕೆ ಅಥವಾ ಎಲೆಯ ಮೂಲೆ ಸ್ವಲ್ಪ ಹರಿದಿದೆ ಎನ್ನುವ ಕಾರಣಕ್ಕೆ ಎಲೆ ಬದಲಿಸಲು ಕೇಳುವುದು ಸಭ್ಯತೆಯ ಲಕ್ಷಣವಲ್ಲ. ಮನೆಗೆ ಹಿರಿಯ ನೆಂಟರು ಬಂದಾಗ ಅವರನ್ನು ಗೌರವದಿಂದ ವಂದನೆಗಳೊಡನೆ ಸ್ವಾಗತಿಸುವುದು, ಮನೆಯಲ್ಲಿ ಹಿರಿಯರು ಮಾತನಾಡುತ್ತಿರುವಾಗ ಅವರ ಮಾತುಗಳನ್ನು ಆಲಿಸುವುದು ತಪ್ಪು ಇತ್ಯಾದಿ ಹತ್ತು ಹಲವು ವೈಚಾರಿಕ ವಿಷಯಗಳನ್ನು ನಮಗೆ ಮನದಟ್ಟು ಮಾಡುತ್ತಿದ್ದರು. ವರ್ಷದಲ್ಲಿ ಎರಡು ಮೂರು ಬಾರಿ ಆಯ್ದ ಇಂಗ್ಲಿಷ್, ಹಿಂದಿ ಚಿತ್ರಗಳನ್ನು ಶಾಲಾ ಹಾಲ್‌ನಲ್ಲಿ ಮಕ್ಕಳಿಗಾಗಿ ಪ್ರದರ್ಶಿಸುತ್ತಿದ್ದರು. ಲಾರೆಲ್ ಆ್ಯಂಡ್ ಹಾರ್ಡಿ, ಎಸ್ಕೇಪ್‌ಡ್ ಇನ್ ಜಪಾನ್, ಚಾರ್ಲಿ ಚಾಪ್ಲಿನ್ ಇತ್ಯಾದಿ ಸಿನಿಮಾಗಳನ್ನು ನಮಗೆ ತೋರಿಸುವ ಮೂಲಕ ನಮ್ಮ ಜ್ಞಾನಾಭಿವೃದ್ಧಿಗೆ ಅವಕಾಶವನ್ನೊದಗಿಸುತ್ತಿದ್ದರು.

ಎಲೋಶಿಯಸ್ ಶಾಲೆಯಲ್ಲಿ ನಾನು ಪ್ರಾಥಮಿಕ ತರಗತಿಗಳಲ್ಲಿ ಕಲಿಯುತ್ತದ್ದ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾಗಿದ್ದವರು ವಂದನೀಯ ಫಾ. ಬಟ್ರಂ ಸಿಕ್ವೇರ. ಇದೀಗ ಪ್ರಾಥಮಿಕ ಶಿಕ್ಷಣವನ್ನು ನಾವು ಮುಗಿಸಿ 65 ವರ್ಷಗಳು ಸರಿದ ಬಳಿಕವೂ ಆಗ ವಿದ್ಯಾರ್ಥಿಗಳಾಗಿದ್ದವರೆಲ್ಲರೂ ಈಗಲೂ ನೆನಪಿಸಿಕೊಳ್ಳುವ ಓರ್ವ ಶಿಕ್ಷಕನಿದ್ದರೆ ಅದು ಫಾ. ಬಟ್ರಂ. ಧಡೂತಿ ದೇಹದ 'ಲಾರೆಲ್ ಆ್ಯಂಡ್ ಹಾರ್ಡಿ' ಇಂಗ್ಲಿಷ್ ಸಿನಿಮಾಗಳ ಹಾರ್ಡಿಯನ್ನು ಗಾತ್ರದಲ್ಲಿ ನೆನಪಿಸುವ ಫಾ. ಬಟ್ರಂ ವಿದ್ಯಾರ್ಥಿಗಳೆಲ್ಲರ ಮೆಚ್ಚಿನ ಗುರುಗಳು. ಅವರ ನಡಿಗೆ ಮಾತಿನ ವೈಖರಿ ಸ್ವರದಲ್ಲಾಗುವ ಬದಲಾವಣೆಗಳು, ತೋರಿಕೆಯ ಸಿಟ್ಟು, ಸಿಟ್ಟಿನ ನಡುವೆಯೂ ಪ್ರತ್ಯಕ್ಷವಾಗುತ್ತಿದ್ದ ಕರುಣಾಮಯ ವ್ಯಕ್ತಿತ್ವ ಇವೆಲ್ಲವೂ ವಿದ್ಯಾರ್ಥಿಗಳಿಗೆ ಆಪ್ಯಾಯಮಾನವಾಗಿತ್ತು. ಪ್ರತಿ ತರಗತಿಯ ಹಿಂಬದಿಯಲ್ಲಿದ್ದ ಖಾಲಿ ಜಮೀನಿನಲ್ಲಿ ಆಯಾ ತರಗತಿಯ ವಿದ್ಯಾರ್ಥಿಗಳಿಂದ ತರಕಾರಿ ಬೆಳೆಯುವ ಸ್ಪರ್ಧೆಯನ್ನು ಅವರು ಏರ್ಪಡಿಸುತ್ತಿದ್ದರು. ಈ ತೋಟಗಾರಿಕೆಯ ಕೆಲಸ ಕೇವಲ ನಾಲ್ಕು ಮತ್ತು ಐದನೆಯ ತರಗತಿಗಳ ವಿದ್ಯಾರ್ಥಿಗಳಿಗೆ. ಏಕೆಂದರೆ ಆ ತರಗತಿಗಳ ಹಿಂಬದಿಯಲ್ಲಿ ಮಾತ್ರ ಖಾಲಿ ಜಾಗ ಇರುತ್ತಿತ್ತು. ಬೀಜ, ಗೊಬ್ಬರ ಇತ್ಯಾದಿಗಳನ್ನು ಫಾ. ಬಟ್ರಂರವರೆ ಪೂರೈಸುತ್ತಿದ್ದರು. ಮನೆಯಲ್ಲಿ ದನ ಇರುವವರನ್ನು ಸೆಗಣಿ ತರಲು ಹೇಳುತ್ತಿದ್ದರು. ಹಾಗೆಯೆ ಬೂದಿಯನ್ನು ಕೂಡ. ಅತಿ ಹೆಚ್ಚು ತರಕಾರಿ ಬೆಳೆದ ತರಗತಿಗೆ ಬಹುಮಾನದ ಆಮಿಶ ಇರುತ್ತಿತ್ತು. ಸಹಜವಾಗಿಯೆ ಮಕ್ಕಳು ಹೆಚ್ಚು ಕ್ರಿಯಾಶೀಲರಾಗಿ ಇದರಲ್ಲಿ ತೊಡಗಿಕೊಳ್ಳುತ್ತಿದ್ದರು. ನಾನು ನನ್ನ ಮನೆಯಂಗಳದಲ್ಲಿ ತರಕಾರಿ ಬೆಳೆಸುವ ಹಣ್ಣು ಹಂಪಲುಗಳನ್ನು ಈಯುವ ಗಿಡ ಮರಗಳನ್ನು ಬೆಳೆಸುವ ಹವ್ಯಾಸವನ್ನು ಹಾಕಿಕೊಂಡಿದ್ದೇನೆ. ಸುಮಾರು 40 ಜಾತಿಯ ನೂರಕ್ಕೂ ಮಿಕ್ಕಿ ಹಣ್ಣಿನಗಿಡ ಮರಗಳು ನನ್ನ ಮನೆಯ 20 ಸೆಂಟ್ಸ್ ಸ್ಥಳವನ್ನಾಕ್ರಮಿಸಿಕೊಂಡಿವೆ. ತೋಟಗಾರಿಕೆ ಒಂದು ಹವ್ಯಾಸವಾಗಿ ನನ್ನಲ್ಲಿ ಬೆಳೆಯಲು ಬಾಲ್ಯದಲ್ಲೆ ಪ್ರೇರಣೆ ದೊರಕಿದ್ದು ಫಾ. ಬಟ್ರಂ ಸಿಕ್ವೇರರವರ ತೋಟಗಾರಿಕೆಯಿಂದ.

ಅಲೋಶಿಯಸ್ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದ ವಿದ್ಯಾಭ್ಯಾಸ, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಿಗೆ ಸಿಗುತ್ತಿದ್ದ ಸಮಾನ ಅವಕಾಶ ಮತ್ತು ಪ್ರೋತ್ಸಾಹ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಅನುವು ಮಾಡಿಕೊಡುತ್ತಿತ್ತೆಂದು ನಂಬಿದವನು ನಾನು. ಪಠ್ಯದಷ್ಟೆ ಪಠ್ಯೇತರ ಚಟುವಟಿಕೆಗಳಿಗೂ ಇಲ್ಲಿ ಸಮಾನವಾದ ಪ್ರಾಮುಖ್ಯತೆಯನ್ನು ಕೊಡಲಾಗುತ್ತಿತ್ತು. ಇದರಿಂದಾಗಿ ಮುಂದಿನ ಜೀವನವನ್ನು ನಾವು ಹೆಚ್ಚಿನ ಆತ್ಮ ವಿಶ್ವಾಸದೊಡನೆ ಎದುರಿಸಿ ಅದರಲ್ಲಿ ಯಶಸ್ವಿಯಾಗುವುದು ಸಾಧ್ಯವಾಗುತ್ತಿತ್ತು.

ಸಿಟಿ ಬಸ್‌ಗಳು ವಿರಳವಾಗಿದ್ದ 1950–60ರ ದಶಕದಲ್ಲಿ ಮತ್ತು ಬಡತನವೂ ಕಾರಣವಾಗಿ, ಹಲವಾರು ವಿದ್ಯಾರ್ಥಿಗಳು ದೂರದ ಪ್ರದೇಶಗಳಾದ ಕೂಳೂರು, ಕಾವೂರು, ಬೊಂದೆಲ್, ಪಡೀಲ್, ನೀರುಮಾರ್ಗ, ಉಳ್ಳಾಲ ಇತ್ಯಾದಿ ಪ್ರದೇಶಗಳಿಂದ ನಡೆದುಕೊಂಡು ಬಂದು ಕಲಿಯುತ್ತಿದ್ದರು. 1950–60ರ ದಶಕದಲ್ಲಿ ಶಾಲಾ ಸಮವಸ್ತ್ರ ಚಾಲ್ತಿಯಲ್ಲಿದ್ದ ಕೆಲವೇ ಕೆಲವು ಶಾಲೆಗಳಲ್ಲಿ ಅಲೋಶಿಯಸ್ ಕೂಡಾ ಒಂದಾಗಿತ್ತು. ಕಡು ನೀಲಿ–ಬಣ್ಣದ ಚಲ್ಲಣ ಮತ್ತು ಬಿಳಿ ಅಂಗಿ ನಮ್ಮ ಸಮವಸ್ತ್ರವಾಗಿತ್ತು. ಸಮವಸ್ತ್ರದ ಬಣ್ಣದಿಂದಲೇ ಮಂಗಳೂರಿಗರು ಅಲೋಶಿಯಸ್ ಮಕ್ಕಳನ್ನು ಗುರುತಿಸುತ್ತಿದ್ದರು. ನಮ್ಮ ಶಾಲಾ ಸ್ಥಾಪಕರ ದಿನದಂದು ವಿದ್ಯಾರ್ಥಿಗಳೆಲ್ಲರಿಗೂ ಕಬ್ಬು ವಿತರಿಸಲಾಗುತ್ತಿತ್ತು. ಆ ಸಂಭ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಕೈಯಲ್ಲಿ ಕಬ್ಬನ್ನು ಹಿಡಿದುಕೊಂಡು ಮನೆಗೆ ಹೋಗುವಾಗ ಮಂಗಳೂರಿಗರಿಗೆ ಅಲೋಶಿಯಸ್ ಸ್ಥಾಪನಾ ದಿನದ ನೆನಪಾಗುತ್ತಿತ್ತು.

ಸದಾ ವಿದ್ಯಾರ್ಥಿಗಳ ಅಭ್ಯುದಯದ ಬಗ್ಗೆ ಚಿಂತಿಸುತ್ತಿದ್ದ ಶಾಲಾ ಆಡಳಿತ ಮಂಡಳಿ ಕೊನೆಗೂ ದೂರದಿಂದ ನಡೆದುಕೊಂಡು ಬರುತ್ತಿದ್ದ ವಿದ್ಯಾರ್ಥಿಗಳತ್ತ ಗಮನ ಹರಿಸಿ ಅವರಿಗಾಗಿ ಶಾಲಾ ಬಸ್ಸೊಂದನ್ನು ಆರಂಭಿಸಲು ಚಿಂತಿಸಿತು. ಆಗೆಲ್ಲಾ ಶಾಲಾ ಬಸ್ಸುಗಳು ಇರಲೇ ಇಲ್ಲ. ಇಸವಿ 1964. ನಾವಾಗ 10ನೇ ತರಗತಿಯಲ್ಲಿ ಕಲಿಯುತ್ತಿದ್ದೆವು. ಅದೊಂದು ದಿನ ಶಾಲೆ ಬಿಟ್ಟು ಹೆಚ್ಚಿನ ಮಕ್ಕಳೆಲ್ಲ ಮನೆಯತ್ತ ಹೋಗಿಯಾಗಿತ್ತು. ನಾವು ಕೆಲವರು ಹೈಸ್ಕೂಲ್ ಮುಂಭಾಗದಲ್ಲಿ ಕ್ರಿಕೆಟ್ ಆಡುತ್ತಿದ್ದೆವು. ಶಾಲಾ ಸಮವಸ್ತ್ರವಾದ ನೀಲಿ ಮತ್ತು ಬಿಳಿ ಬಣ್ಣದಿಂದ ಕೂಡಿ ಆಕರ್ಷಕವಾಗಿ ಕಾಣುತ್ತಿದ್ದ ಹಚ್ಚ ಹೊಸ ಬಸ್ಸೊಂದು ಶಾಲಾ ಮುಂಭಾಗವನ್ನು ಪ್ರವೇಶಿಸಿತು. ಸ್ಕೂಲ್ ಬಸ್ ಬಂದ ಸಂಭ್ರಮ. ಆಡುವುದನ್ನು ನಿಲ್ಲಿಸಿದ ನಾವು ಬಸ್ಸಿನ ಬಳಿ ಹೋಗಿ ಬಸ್ಸಿಗೆ ಸುತ್ತು ಹೊಡೆಯುತ್ತ ಅದರ ಅಂದ ಚಂದವನ್ನು ಆನಂದಿಸುತ್ತಿರುವಾಗಲೆ ಮುಖ್ಯೋಪಾಧ್ಯಾಯರಾದ ಫಾ. ಸ್ಟ್ಯಾನಿ ಕೊಯಿಲೊ ಅವರು ಆಗಮಿಸಿದರು. ಬಸ್ಸನ್ನು ಚಲಾಯಿಸಿಕೊಂಡು ಬಂದ ಚಾಲಕನೊಡನೆ ಮಾತನಾಡುತ್ತ ಬಸ್ಸನ್ನು ಒಮ್ಮೆ ಕೂಲಂಕುಶವಾಗಿ ಪರೀಕ್ಷಿಸಿದ ಫಾದರ್ ಸುಮಾರು 15 ರಷ್ಟಿದ್ದ ನಮ್ಮೆಲ್ಲರನ್ನು ಬಸ್ಸಿನಲ್ಲಿ ಕೂರಿಸಿಕೊಂಡು ಡ್ರೈವರ್ ಸೀಟಿನಲ್ಲಿ ತಾನು ಕುಳಿತುಕೊಂಡು ಶಾಲೆಯ ಎದುರು ಭಾಗದ ವಿಶಾಲ ಸ್ಥಳದಲ್ಲಿ ಬಸ್ಸನ್ನು ತಾವೇ ಒಂದು ಸುತ್ತು ಚಲಾಯಿಸುವ ಮೂಲಕ ಹೊಸ ಬಸ್ಸಿನಲ್ಲಿ ನಮಗೆ ಕುಳಿತುಕೊಳ್ಳುವ ಅವಕಾಶವನ್ನು ಮಾಡಿಕೊಟ್ಟಿದ್ದರು.

ಹೈಸ್ಕೂಲ್ ವಿದ್ಯಾಭ್ಯಾಸದ ಜೊತೆಗೆ ನಮಗೆ ದೊರಕಿದ ಒಂದು ಮಹತ್ವದ ಕೊಡುಗೆ ವೃತ್ತಿ ತರಬೇತಿ (ಕ್ರಾಫ್ಟ್). ವೃತ್ತಿ ತರಬೇತಿಯಲ್ಲಿ ಮುದ್ರಣ (PRINTING), ಕಮ್ಮಾರ ಮತ್ತು ಮರದ ಕೆಲಸ ಇತ್ಯಾದಿ ಮೂರು ವಿಭಾಗಗಳಿದ್ದುವು. ಮುದ್ರಣದಲ್ಲಿ ಅಕ್ಷರ ಜೋಡಣೆ (TYPE SETTING) ಮಾಡಿ ಆ ಪ್ಲೇಟನ್ನು ಮುದ್ರಣ ಯಂತ್ರಕ್ಕೆ ಅಳವಡಿಸಿ ಮುದ್ರಿಸುವುದನ್ನು ಕಲಿಸುತ್ತಿದ್ದರು. ಕಮ್ಮಾರನ ಗರಡಿಯಲ್ಲಿ ಕಬ್ಬಿಣವನ್ನು ಬೆಂಕಿಯಲ್ಲಿ ಸರಿಯಾಗಿ ಕೆಂಪಗಾಗುವವರೆಗೆ ಕಾಯಿಸಿ ಬಳಿಕ ಅದನ್ನು ಸುತ್ತಿಗೆಯಿಂದ ಬಡಿಯುತ್ತ ಕತ್ತಿ ಇತ್ಯಾದಿ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವುದು ಮರದ ಕೆಲಸದ ವಿಭಾಗದಲ್ಲಿ ಮರದ ತುಂಡುಗಳಿಗೆ ಕಿಸೂಲಿ ಹಾಕಿ ನಯಗೊಳಿಸುವುದು, ಕೀಲುಗಳಿಗೆ ತೂತು ಕೊರೆಯುವುದು ಮುಂತಾದುವುಗಳಿಂದ ತೊಡಗಿ ಕುರ್ಚಿ, ಮೇಜುಗಳನ್ನು ತಯಾರಿಸುವುದು ಇತ್ಯಾದಿ ವೃತ್ತಿ ತರಬೇತಿಯನ್ನು ನೀಡಲಾಗುತ್ತಿತ್ತು. ಈ ರೀತಿಯ ವೃತ್ತಿ ತರಬೇತಿಯ ಪರಿಣಾಮವಾಗಿಯೆ, ಮಂಗಳೂರಿನಲ್ಲಿ ಸ್ಥಾಪಿತವಾದ ಹೆಚ್ಚಿನ ಮುದ್ರಣಾಲಯಗಳು ಎಂಜಿನಿಯರಿಂಗ್ FABRICATION ಕಾರ್ಯಾಗಾರಗಳು ಅಲೋಶಿಯಸ್ ವಿದ್ಯಾಸಂಸ್ಥೆಯಲ್ಲಿ ಕಲಿತವರದ್ದೇ ಆಗಿರುತ್ತಿತ್ತು ಎಂಬುದನ್ನು ಗಮನಿಸಿದಾಗ ಈ ವೃತ್ತಿ ತರಬೇತಿಯ ಮಹತ್ವದ ಅರಿವಾಗುತ್ತದೆ. ಜೀವನ ಮೌಲ್ಯಗಳನ್ನು ಹೆಚ್ಚಿಸುವಂತಹ ಈ ತೆರನ ಕಲಿಕೆಗಳಿಗೆ ಅವಕಾಶವಿದ್ದ ವಿದ್ಯಾಸಂಸ್ಥೆಗಳು ಆ ಕಾಲದಲ್ಲಿ ಬಲು ವಿರಳವಾಗಿದ್ದುವು.

ವೃತ್ತಿ ತರಬೇತಿಯಲ್ಲಿ ಮತ್ತೊಂದು ಪ್ರಮುಖವಾದ ವಿಭಾಗ ಬುಕ್ ಬೈಂಡಿಂಗ್. ನಮ್ಮ ಪುಸ್ತಕಗಳನ್ನು ಬುಕ್ ಬೈಂಡ್ ಮಾಡಿ ಕಿವಿಗಳು ಬಾರದಂತೆ (ಮೂಲೆಗಳು ಮಡಚಿ ಹೋಗದಂತೆ) ಜಾಗ್ರತೆ ವಹಿಸುತ್ತ ಅವು ದೀರ್ಘ ಕಾಲ ಬಾಳ್ವಿಕೆ ಬರುವಂತೆ ನೋಡಿಕೊಳ್ಳುವುದು ಹೇಗೆ ಎಂಬುದನ್ನು ಕಲಿಸುತ್ತಿದ್ದರು. ಪುಟಗಳು ನಡುವೆ ಹರಿದು ಹೊರ ಬಂದಿದ್ದಲ್ಲಿ ಹೇಗೆ ಅವನ್ನು ಜೋಡಿಸಬಹುದು, ಅವುಗಳನ್ನು ಹೊಲಿಯುವ ವಿಧಾನ ಅಥವಾ ಯಾವ ರೀತಿ ಗೋಂದಿನಿಂದ ಅಂಟಿಸುವುದು, ಪುಸ್ತಕದ ಗಾತ್ರದ ರಟ್ಟಿನ ಎರಡು ತುಂಡುಗಳನ್ನು ಆರಿಸಿ ಪುಸ್ತಕದ ಹೊರ ಮೈ ಕವಚವನ್ನು ತೆಗೆದು ಆ ರಟ್ಟಿಗೆ ಅವನ್ನು ಅಂಟಿಸಿ ಆ ರಟ್ಟಿನ ತುಂಡುಗಳನ್ನು ಪುಸ್ತಕದ ಎರಡೂ ಭಾಗಗಳಿಗೆ ಗೋಂದಿನಿಂದ ಅಂಟಿಸಿ ಅಥವಾ ಹೊಲಿಯುವ ಮೂಲಕ ಬುಕ್ ಬೈಂಡ್ ಮಾಡಿದ ಪುಸ್ತಕವನ್ನಾಗಿಸುವುದು, ಪುಟಗಳಿಗೆ ಕಿವಿಗಳು ಬಂದಿದ್ದಲ್ಲಿ ಅದನ್ನು ಬಿಡಿಸಿ ನೇರವಾಗಿಸಿದ ಬಳಿಕ ಪುಸ್ತಕವನ್ನು ಪ್ರೆಸ್ಸಿನಲ್ಲಿಟ್ಟು ಅದರ ಮೇಲೆ ಒತ್ತಡವನ್ನು ಹಾಕಿ ನೇರವಾದ ಪುಟಗಳಲ್ಲಿ ಪುನಃ ಕಿವಿಗಳು ಬಾರದಂತೆ ಕ್ರಮ ತೆಗೆದುಕೊಳ್ಳುವುದು, ಪುಸ್ತಕವನ್ನು ಚೊಕ್ಕವಾಗಿ ಅಂಟಿಸಿಡಲು ಬೇಕಾಗುವ ಗೋಂದನ್ನು ತಯಾರಿಸುವ ವಿಧಾನ, ಇತ್ಯಾದಿಗಳನ್ನು ಸ್ಥೂಲವಾಗಿ ಎಲ್ಲರಿಗೂ ಮನದಟ್ಟಾಗುವಂತೆ ವಿವರಿಸುತ್ತಿದ್ದರು.

ನಾವುಗಳು ವಿದ್ಯಾರ್ಥಿಗಳಾಗಿದ್ದ ಆ ಕಾಲದಲ್ಲಿ ಪತ್ತೇದಾರಿ ಕಾದಂಬರಿಗಳು ನಮ್ಮನ್ನು ಹೆಚ್ಚಾಗಿ ಆಕರ್ಷಿಸುತ್ತಿದ್ದುವು. ಅದರಲ್ಲೂ ಮುಖ್ಯವಾಗಿ ಖ್ಯಾತ ಸಾಹಿತಿ ನರಸಿಂಹಯ್ಯನವರು ಬರೆದು ಪ್ರಕಟಿಸುತ್ತಿದ್ದ ಪುರುಷೋತ್ತಮ ರಾಮನಾಥ ನಾಮಾಂಕಿತ ಪತ್ತೆದಾರರ ಕೃತಿಗಳು. ಈ ಪುಸ್ತಕಗಳು ನಮ್ಮ ಶಾಲಾ ಲೈಬ್ರೆರಿಯಲ್ಲಿ ದೊರಕುತ್ತಿದ್ದುವು. ಪತ್ತೆದಾರಿ ಕಾದಂಬರಿಗಳನ್ನು ಬಹು ಇಷ್ಟಪಟ್ಟು ಓದುತ್ತಿದ್ದ ನಾನು ಮತ್ತು ನನ್ನ ಸ್ನೇಹಿತ ಜಯರಾಮ್ ಸುಬ್ಬರಾವ್ ಅಂತಹ ಪತ್ತೆದಾರಿ ಪುಸ್ತಕಗಳಿಂದ ಪ್ರೇರೇಪಿತರಾಗಿ, ಕೆಲವು ಪುಸ್ತಕಗಳನ್ನು ಅನುಕರಿಸಿ ನಮ್ಮದೇ ಆದ ಒಂದು ಕಿರು ಪತ್ತೇದಾರಿ ಕಥೆಯನ್ನು ಬರೆದಿದ್ದೆವು. ಆಗ ನಾವು 8ನೇ ತರಗತಿಯ ವಿದ್ಯಾರ್ಥಿಗಳಾಗಿದ್ದೆವು. ವಿದ್ಯಾರ್ಥಿಗಳ ಇಂತಹ ಪ್ರಾರಂಭಿಕ ಚಟುವಟಿಕೆಗಳನ್ನು ಮೆಚ್ಚಿ ಪ್ರೋತ್ಸಾಹಿಸುತ್ತಿದ್ದ ನಮ್ಮ ಮುಖ್ಯೋಪಾಧ್ಯಾಯರಾದ ಫಾ. ಸ್ಟ್ಯಾನಿ ಕೊಯಿಲೊ ಅವರು ನಮ್ಮನ್ನು ಉತ್ತೇಜಿಸಲೋಸುಗ ಅದನ್ನು ಶಾಲೆಯ ಕ್ರಾಫ್ಟ್ ತರಬೇತಿಯ ಮುದ್ರಣಾಲಯದಲ್ಲಿ ನಮ್ಮಿಂದಲೆ ಅಕ್ಷರ ಜೋಡಣೆಯನ್ನು ಮಾಡಿಸಿ ಅಲ್ಲಿಯ ಕೆಲಸಗಾರರಿಂದ ಅದನ್ನು ತಿದ್ದಿ, ಮುದ್ರಿಸಿ ಬುಕ್ ಬೈಂಡಿಂಗ್ ಕೂಡಾ ಮಾಡಿಸಿ ನಮಗಿಬ್ಬರಿಗೂ ಒಂದೊಂದು ಪ್ರತಿಯನ್ನು ಕೊಟ್ಟುದಲ್ಲದೆ ಅದರ ಪ್ರತಿಗಳನ್ನು ಶಾಲಾ ಲೈಬ್ರೆರಿಯಲ್ಲಿ ಇರಿಸುವ ಮೂಲಕ ನಮ್ಮನ್ನು ಉತೇಜಿಸಿದ್ದರು.

ಕ್ರೀಡಾ ಕ್ಷೇತ್ರದಲ್ಲಿಯೂ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಅವಕಾಶ ಸಂತ ಅಲೋಶಿಯಸ್ ವಿದ್ಯಾ ಸಂಸ್ಥೆಯಲ್ಲಿ ಸಿಗುತ್ತಿತ್ತು. ಬೇರೆ ಶಾಲೆಗಳಲ್ಲಿ ಅವಕಾಶ ಇರದ ಅಥವಾ ಸೌಕರ್ಯಗಳಿಲ್ಲದ ಬೇಸ್ ಬಾಲ್, ಬಾಸ್ಕೆಟ್ ಬಾಲ್, ಹಾಕಿ, ಶಟಲ್ ಬ್ಯಾಡ್ ಮಿಂಟನ್, ಬಾಲ್ ಬ್ಯಾಡ್‌ಮಿಂಟನ್ ಇತ್ಯಾದಿ ಆಟಗಳಲ್ಲಿ ಪರಿಣಿತಿಯನ್ನು ಪಡೆಯುವ ಅವಕಾಶ ಇಲ್ಲಿನ ವಿದ್ಯಾರ್ಥಿಗಳಿಗೆ ಲಭಿಸುತ್ತಿತ್ತು.

**(ಮುಂದಿನ ಪುಟಕ್ಕೆ)**

(ಹಿಂದಿನ ಪುಟದಿಂದ)




2014ರಲ್ಲಿ ಆರಿಸಲ್ಪಟ್ಟ ಅಲೋಶಿಯಸ್ ಎಮಿನೆಂಟ್ ಪ್ರಶಸ್ತಿ ಪುರಸ್ಕೃತರು. ಎಡಭಾಗದಲ್ಲಿ ಕುಳಿತಿರುವವರು ಎನ್.ಜಿ.ಮೋಹನ್.

ಹಾಗೇನೆ ದಾಖಲೆ ಸಂಖ್ಯೆಯ ಪುಸ್ತಕಗಳನ್ನೊಳಗೊಂಡ ವಿಶಾಲವಾದ ಲೈಬ್ರೆರಿ ಮತ್ತು ವಾಚನಾಲಯ ಅಲೋಶಿಯಸ್‌ನ ವಿಶೇಷತೆಯಾಗಿತ್ತು. ಇಷ್ಟು ಮಾತ್ರವಲ್ಲದೆ ಹಲವಾರು ಪ್ರಾಚೀನ ಮತ್ತು ವಿನೂತನವಾದ ವಸ್ತುಗಳಿಂದ ಕೂಡಿದ ವಸ್ತು ಸಂಗ್ರಹಾಲಯ, ಸುಸಜ್ಜಿತವಾದ ವಿಜ್ಞಾನದ ಪ್ರಯೋಗಾಲಯ, ವಿಜ್ಞಾನ ವಿಭಾಗದ ಜಗಲಿಯಲ್ಲಿ ನೇತಾಡುತ್ತಿದ್ದ ತಿಮಿಂಗಲದ ಅಸ್ತಿಪಂಜರ, ಪ್ರಯೋಗಾಲದಲ್ಲಿ ಸಂಶೋಧನೆಗಾಗಿ ವಿಜ್ಞಾನ ವಿಭಾಗದ ಹೊರಭಾಗದಲ್ಲಿದ್ದ ನೀರಿನ ತೊಟ್ಟಿಯಲ್ಲಿ ಸಾಕುತ್ತಿದ್ದ ಕಪ್ಪೆಗಳು, ವಿಜ್ಞಾನ ವಿಭಾಗದ ಕೆಳಭಾಗದಲ್ಲಿದ್ದ ಅನಿಲ ಉತ್ಪಾದನಾ ಟ್ಯಾಂಕ್‌ಗಳು, ಆ ಟ್ಯಾಂಕಿನ ಪಕ್ಕದಿಂದ ನಡೆದುಕೊಂಡು ಹೋಗುವಾಗ ಅನುಭವವಾಗುತ್ತಿದ್ದ ಅನಿಲದ ಗಬ್ಬು ವಾಸನೆ, ಇವೆಲ್ಲವುಗಳಿಂದಾಗಿ ಅಲೋಶಿಯಸ್ ವಿದ್ಯಾ ಸಂಸ್ಥೆ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಮತ್ತು ಮುಖ್ಯವಾಗಿ ಅವರ ಸರ್ವತೋಮುಖ ಬೆಳವಣಿಗೆಗೆ ಮತ್ತು ವಿಶೇಷವಾಗಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿರುತ್ತಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಜೀವನದ ಪಾಠದಲ್ಲಿ ಅಲೋಶಿಯಸ್ ವಿದ್ಯಾರ್ಥಿಗಳು ಹೆಚ್ಚಿನ ಯಶಸ್ಸನ್ನು ಗಳಿಸುತ್ತಿದ್ದರು.

ಎಲೋಶಿಯಸ್ ವಿದ್ಯಾ ಸಂಸ್ಥೆಯ ಇನ್ನೊಂದು ವೈವಿಷ್ಟತೆ, ಶಾಲಾ ದಿನಗಳಲ್ಲಿ ಪ್ರತಿ ಸಾಯಂಕಾಲ ನಡೆಯುತ್ತಿದ್ದ ವಾದ್ಯ ತರಗತಿ (BAND CLASS). ಸಂಜೆ ಸುಮಾರು 5 ಗಂಟೆಯಿಂದ 6 ಗಂಟೆಯ ವರೆಗೆ ಈ ವಾದ್ಯ ತರಗತಿಯ ಬ್ಯಾಂಡ್ ವಾದ್ಯ ಕೆಳ ಪ್ರದೇಶವಾದ ಕೊಡಿಯಾಲ್‌ಬೈಲು ಪರಿಸರದಲ್ಲಿ ಪ್ರತಿಧ್ವನಿಸುತ್ತ ಮಂಗಳೂರಿಗರ ಕಿವಿಗಳಿಗೆ ವಾದ್ಯ ಸಂಗೀತದ ರಸದೌತಣವನ್ನು ಉಣ ಬಡಿಸುತ್ತಿತ್ತು. ಕೇಳುವ ಕಿವಿಗಳು ಅಲೋಶಿಯಸ್‌ನ ವಾದ್ಯ ತರಗತಿ ನಡೆಯುತ್ತಿದೆ ಎಂಬುದನ್ನು ಗಮನಿಸುತ್ತಿದ್ದವು. ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಾದ್ಯ ಸಂಗೀತದಲ್ಲಿ ಪರಿಣಿತಿಯನ್ನು ಪಡೆದಿದ್ದಾರೆ. ವ್ಯಕ್ತಿತ್ವ ವಿಕಸನಕ್ಕೆ ಇನ್ನೊಂದು ಉತ್ತಮ ಉದಾಹರಣೆ.

ಮಂಗಳೂರಿನ ಪ್ರಪ್ರಥಮ ವಿದ್ಯಾಸಂಸ್ಥೆ ಆರಂಭವಾದುದು 1838ರಲ್ಲಿ ಮಂಗಳೂರಿನಲ್ಲಿ ಕಾರ್ಯಾಚರಿಸುತ್ತಿದ್ದ ಬಾಸೆಲ್ ಮಿಶನ್ ಸಂಸ್ಥೆಯವರು ಬಾಸೆಲ್ ಇವಾಂಜಲಿಕ್ ಮಿಶನ್ ಎನ್ನುವ ಹೆಸರಿನಲ್ಲಿ ಜಿಲ್ಲೆಯ ಪ್ರಪ್ರಥಮ ಶಾಲೆಯನ್ನು ನಗರದ ಕಾರ್‌ಸ್ಟ್ರೀಟ್‌ನಲ್ಲಿ ಮಂಗಳೂರಿನಿಂದ ದಕ್ಷಿಣಕ್ಕೆ ಎಂಟು ಕಿ.ಮೀ ದೂರದಲ್ಲಿರುವ ಉಚ್ಚಿಲ ಎನ್ನುವ ಊರಿನಲ್ಲಿ 1945ರಲ್ಲಿ ಜನಿಸಿದ ಮಂಜಪ್ಪ ಎನ್ನುವ ಹುಡುಗ ಹುಟ್ಟಿದ್ದು ವಿದ್ಯೆಯ ಗಂಧಗಾಳಿ ಇಲ್ಲದ ಮನೆಯೊಂದರಲ್ಲಿ. 'ಶಾಲೆ' ಎನ್ನುವ ಪದವನ್ನೆ ಕೇಳರಿಯದ ಆ ಊರಿನಲ್ಲಿ ವಿದ್ಯಾಭ್ಯಾಸದ ಕನಸನ್ನು ಕಂಡವನು ಈ ಹುಡುಗ. ಅವನ ಮನೆಯವರ ಮತ್ತು ಊರಿನ ಹೆಚ್ಚಿನೆಲ್ಲರ ಕುಲ ಕಸುಬು ಮೀನುಗಾರಿಕೆ. ಮಂಗಳೂರಿನಲ್ಲಿ ಆಗ ಕಾರ್ಯಾಚರಿಸುತ್ತಿದ್ದ ಬಿಇಎಂ ಶಾಲೆಯ ಬಗ್ಗೆ ಕೇಳಿ ತಿಳಿದಿದ್ದ ಈ ಹುಡುಗನಿಗೆ ಹೇಗಾದರೂ ಮಾಡಿ ಆ ಶಾಲೆಯಲ್ಲಿ ಕಲಿಯಬೇಕೆಂಬ ಅಭಿಲಾಶೆ. ಆಶೆ ಒಂದು ಸಂಕಲ್ಪವಾಗಿ ಮನೆಯವರೆಲ್ಲ ಮೀನುಗಾರಿಕೆಯಲ್ಲಿ ವ್ಯಸ್ತರಾಗಿದ್ದ ಸಮಯದಲ್ಲಿ ಮಂಜಪ್ಪ ಬೆಳಗ್ಗೆದ್ದು ನೇತ್ರಾವತಿಯ ವರೆಗೆ ನಡೆದು, ಅಲ್ಲಿಂದ ದೋಣಿಯ ಮೂಲಕ ನದಿಯನ್ನು ದಾಟಿ ಮತ್ತೆರಡು ಕಿ.ಮೀ. ನಡೆದು ಶಾಲೆಯನ್ನು ತಲುಪಿ ತನ್ನ ಮನದಾಸೆಯನ್ನು ಶಾಲಾ ಮುಖ್ಯಸ್ಥರಿಗೆ ತಿಳಿಸಿ ಪ್ರವೇಶ ಗಿಟ್ಟಿಸುತ್ತಾನೆ. ಕಷ್ಟಪಟ್ಟು ಕಲಿತ IV FORM ವರೆಗೆ ಕಲಿತು ಮುಂದೆ ಮಂಗಳೂರಿನ ನ್ಯಾಯಾಲಯದಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ನಿಯುಕ್ತಿಯಾಗುತ್ತಾನೆ. ಮುಂದೆ ಮದುವೆಯಾಗಿ ಏಳು ಮಂದಿ ಗಂಡು ಮಕ್ಕಳು ಮತ್ತು ಈರ್ವರು ಹೆಣ್ಮಕ್ಕಳು ಮತ್ತು ಪತ್ನಿಯೊಡನೆ ಮಂಗಳೂರಿನಲ್ಲಿ ನೆಲೆಯನ್ನು ಕಂಡುಕೊಳ್ಳುತ್ತಾನೆ. ನ್ಯಾಯಾಲಯದಲ್ಲಿದ್ದ ಬ್ರಿಟಿಷ್ ನ್ಯಾಯಾಧೀಶರುಗಳ ಪ್ರೇರಣೆಯಿಂದ ತನ್ನ 7 ಮಂದಿ ಗಂಡು ಮಕ್ಕಳಿಗೂ ವಿದ್ಯಾಭ್ಯಾಸ ದೊರಕುವಂತೆ ನೋಡಿಕೊಳ್ಳುತ್ತಾನೆ. ಅಲೋಶಿಯಸ್ ಕಾಲೇಜಿನ ಕೃಪಾ ಕಟಾಕ್ಷದಿಂದ ಏಳು ಮಂದಿ ಕೂಡಾ ಆಗಿನ ಕಾಲಕ್ಕೆ ಪದವೀಧರರಾದುದಲ್ಲದೆ, ಕೊನೆಯ ಮೂವರು ಬಹುಪದವೀಧರರಾಗಿ ಜೀವನದಲ್ಲಿ ವ್ಯವಸ್ಥಿತವಾಗಿ ನೆಲೆಸುತ್ತಾರೆ. ಈ ತಂದೆ ಮಕ್ಕಳು ತಮ್ಮೂರ ಮಕ್ಕಳೂ ತಮ್ಮ ಹಾಗೆ ಕಲಿತು ಮುಂದೆ ಬರಬೇಕೆಂಬ ಕನಸನ್ನು ಹೊತ್ತುಕೊಂಡು ಅವರ ಊರಾದ ಉಚ್ಚಿಲದಲ್ಲಿ 1918ನೆ ಇಸವಿಯಲ್ಲಿ ಶಾಲೆಯನ್ನು ಆರಂಭಿಸುತ್ತಾರೆ. ಜೀವನದಲ್ಲಿ ಈ ತಂದೆ ಮಕ್ಕಳು ಕಲಿತು ದೊಡ್ಡ ಹುದ್ದೆಗಳಲ್ಲಿ ಗೌರವಯುತ ಜೀವನವನ್ನು ನಡೆಸುತ್ತ ಸಾಧಕರಾಗಿ ಮೆರೆಯುವುದರಿಂದ ಪ್ರೇರೇಪಿತರಾಗಿ ತಾವೂ ಕೂಡಾ ಕಲಿಯಬೇಕೆಂಬ ಹಂಬಲದಿಂದ ಹೊಸದಾಗಿ ಆರಂಭವಾದ ಶಾಲೆಯಲ್ಲಿ ಕಲಿಯಲಾರಂಭಿಸಿ ಈ ಶಾಲೆ ಶತಮಾನೋತ್ಸವವನ್ನಾಚರಿಸಿದ ವೇಳೆಗೆ 100% ಸಾಕ್ಷರತೆಯನ್ನು ಪಡೆದ ಮೊತ್ತ ಮೊದಲ ಸಮಾಜವಾಗಿ ಗುರುತಿಸುವಂತಾದುದು ಸಪ್ತ ಸಹೋದರರು ಸಂತ ಎಲೋಶಿಯಸ್ ವಿದ್ಯಾಸಂಸ್ಥೆಯಿಂದ ಪಡೆದ ಶಿಕ್ಷಣದ ಕಾರಣದಿಂದಾಗಿ. ಹೀಗೆ ಒಂದು ಸಮಾಜದ ಸಂಪೂರ್ಣ ಸಾಕ್ಷರತೆಗೆ ಎಲೋಶಿಯಸ್ ಕಾರಣಕರ್ತವಾಗಿತ್ತು.


